ಸಂಪಾದಕರು
ಆನಂದಯ್ಯ ವಿರಕ್ತಮಠ
ಎಂ.ಎ ಪತ್ರಿಕೋದ್ಯಮ
ಎಂ.ಎ ಇಂಗ್ಲೀಷ್ , ಬಿ.ಇಡಿ

Title code: KNKAN/26/A0482

# ಜನಶ್ರೀ ಟೈಮ್ಸ್

ಕನ್ನಡ ದಿನಪತ್ರಿಕೆ

JANASHREE TIMES janashreetimes2026@gmail.com KANNADA DAILY MORNING

ಸಂಪುಟ : 01 ಸಂಚಿಕೆ : 03 ದಿನಾಂಕ: 06-06-2026 ಶನಿವಾರ ಪುಟ : 04 ದರ : 4 ರೂ. VOLUME 01 ISSUE: 03 THURSDAY 21-05-2026 PAGE: 04 PRICE : 4/-

## ತೈಲ ಬೆಲೆ ಆಘಾತದಿಂದ ಆರ್ಥಿಕ ಅನಿಶ್ಚಿತತೆ ನಡುವೆಯೂ ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡ ಆರ್‌ಬಿಐ

ಮುಂಬೈ: ಪಶ್ಚಿಮ ಏಷ್ಯಾದಲ್ಲಿ ಮುಂದುವರಿದಿರುವ ಸಂಘರ್ಷ, ಏರಿಕೆಯಾಗಿರುವ ಇಂಧನ ಬೆಲೆಗಳು ಹಾಗೂ ಜಾಗತಿಕ ಸರಬರಾಜು ಸರಪಳಿ ಅಡಚಣೆಗಳಿಂದ ಆರ್ಥಿಕ ಬೆಳವಣಿಗೆ ಮತ್ತು ಹಣದುಬ್ಬರದ ಮೇಲೆ ಹೆಚ್ಚುತ್ತಿರುವ ಅಪಾಯಗಳ ನಡುವೆಯೇ, ಭಾರತೀಯ ರಿಸರ್ವ್ ಬ್ಯಾಂಕ್ ಇಂದು ತನ್ನ ಮಾನದಂಡದ ರೆಪೊ ದರವನ್ನು ನಿರೀಕ್ಷೆಯಂತೆ ಶೇ. 5.25ರಲ್ಲೇ ಯಥಾಸ್ಥಿತಿಯಲ್ಲಿ ಉಳಿಸಿದೆ. ಜೊತೆಗೆ, ವಿದೇಶಿ ಬಂಡವಾಳವನ್ನು ಆಕರ್ಷಿಸಲು ಹಾಗೂ ರೂಪಾಯಿಗೆ ಬೆಂಬಲ ನೀಡಲು ಹಲವು ಕ್ರಮಗಳನ್ನು ಘೋಷಿಸಿದೆ.

ರೂಪಾಯಿ ಮೌಲ್ಯಕ್ಕೆ ಬೆಂಬಲ ನೀಡುವ ಉದ್ದೇಶದಿಂದ, ಸರ್ಕಾರಿ ಭದ್ರತಾ ಪತ್ರಿಕೆಗಳಲ್ಲಿ ಹೂಡಿಕೆ ಮಾಡುವ ಅರ್ಹ ವಿದೇಶಿ ಹೂಡಿಕೆದಾರರಿಗೆ ಬಡ್ಡಿ ಆದಾಯ ಮತ್ತು ಬಂಡವಾಳ ಲಾಭದ ಮೇಲಿನ ತೆರಿಗೆಗಳನ್ನು ರದ್ದುಪಡಿಸುವುದು, ಅನಿವಾಸಿ ಭಾರತೀಯರ ವಿದೇಶಿ ಕರೆನ್ಸಿ ಠೇವಣಿಗಳಿಗೆ ರಿಯಾಯಿತಿ ಷರತ್ತುಗಳನ್ನು ಒದಗಿಸುವುದು ಹಾಗೂ ಆಯ್ದ ವಿದೇಶಿ ಸಾಲಗಳಿಗೆ ಹೆಡ್ಜಿಂಗ್ ವೆಚ್ಚಕ್ಕೆ ಸಹಾಯಧನ ನೀಡುವುದು ಸೇರಿದಂತೆ ಹಲವು ಕ್ರಮಗಳನ್ನು ಪ್ರಕಟಿಸಲಾಗಿದೆ. ಹಣಕಾಸು ನೀತಿ ಸಮಿತಿ ಏಕಮತದಿಂದ ರೆಪೊ ದರವನ್ನು ಶೇ. 5.25ರಲ್ಲೇ ಉಳಿಸುವುದಕ್ಕೂ, ತನ್ನ ತಟಸ್ಥ ನಿಲುವನ್ನು ಮುಂದುವರಿಸುವುದಕ್ಕೂ ಮತ ಚಲಾಯಿಸಿತು.ಸುದ್ದಿಗೋಷ್ಠಿಯಲ್ಲಿ




ಗವರ್ನರ್ ಸಂಜಯ್ ಮಲ್ಹೋತ್ರಾ ಅವರು, ಭಾರತವು ಹಿಂದಿನ ಬಿಕ್ಕಟ್ಟುಗಳಿಗಿಂತ ಬಲವಾದ ಸ್ಥೂಲ ಆರ್ಥಿಕ (ಮ್ಯಾಕ್ರೋ ಆರ್ಥಿಕ) ಅಡಿಪಾಯದೊಂದಿಗೆ ಈ ಜಾಗತಿಕ ಅಶಾಂತಿಯ ಹಂತವನ್ನು ಪ್ರವೇಶಿಸಿದೆ ಎಂದು ಹೇಳಿದ್ದಾರೆ. ಆದರೆ, ಹೆಚ್ಚುತ್ತಿರುವ ಭೌಗೋಳಿಕ-ರಾಜಕೀಯ ಉದ್ವಿಗ್ನತೆ, ಏರಿದ ಸರಕು ಬೆಲೆಗಳು ಮತ್ತು ಸರಬರಾಜು ಅಡಚಣೆಗಳು ಆರ್ಥಿಕ ಭವಿಷ್ಯದ ಮೇಲೆ ಅನಿಶ್ಚಿತತೆಯನ್ನು ಉಂಟುಮಾಡುತ್ತಿವೆ ಎಂದು ಎಚ್ಚರಿಸಿದರು.

ಜಾಗತಿಕ ಪರಿಸ್ಥಿತಿ ಹದಗೆಟ್ಟಿದೆ ಎಂಬುದನ್ನು ಸಮಿತಿಯು ಗಮನಿಸಿದೆ ಎಂದು ಅವರು ಹಣಕಾಸು ನೀತಿ ನಿರ್ಧಾರವನ್ನು ಪ್ರಕಟಿಸುವ ವೇಳೆ ಹೇಳಿದರು. ಹೆಚ್ಚಿನ ಸ್ಪಷ್ಟತೆ ಸಿಗುವವರೆಗೆ ಕಾಯುವುದು ಸೂಕ್ತ ಎಂದು ಸಮಿತಿ ಅಭಿಪ್ರಾಯಪಟ್ಟಿದೆ ಎಂದರು. ಹಣದುಬ್ಬರದ ಮೂಲಭೂತ ಒತ್ತಡಗಳು ಇನ್ನೂ ನಿಯಂತ್ರಣದಲ್ಲಿದ್ದರೂ, ಹೆಚ್ಚುತ್ತಿರುವ ವೆಚ್ಚಗಳು ವೇತನ ಮತ್ತು ಹಣದುಬ್ಬರ ನಿರೀಕ್ಷೆಗಳ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದೆ ಎಂದು ಎಚ್ಚರಿಸಿದೆ. ಜೊತೆಗೆ, ಸಾಮಾನ್ಯಕ್ಕಿಂತ ಕಡಿಮೆ ಮಳೆಯ ಮುನ್ಸೂಚನೆ ಹಾಗೂ ಸಂಭವನೀಯ ಪರಿಸ್ಥಿತಿಯು ಮುಂದಿನ ತಿಂಗಳುಗಳಲ್ಲಿ ಆಹಾರ ಬೆಲೆಗಳ ಮೇಲೆ ಒತ್ತಡ ಉಂಟುಮಾಡಬಹುದು ಎಂದು ತಿಳಿಸಿದೆ.

ಪ್ರಸಕ್ತ ಹಣಕಾಸು ವರ್ಷದ ಆರ್ಥಿಕ ಬೆಳವಣಿಗೆಯ ನಿರೀಕ್ಷೆಯನ್ನು ಕಡಿತಗೊಳಿಸಿದ್ದು, 2026-27ನೇ ಸಾಲಿನ ನೈಜ ಜಿಡಿಪಿ ಬೆಳವಣಿಗೆ ದರವನ್ನು ಶೇ. 6.6 ಎಂದು ಅಂದಾಜಿಸಿದೆ. ಇದು ಏಪ್ರಿಲ್‌ನಲ್ಲಿ ನೀಡಿದ್ದ ಶೇ. 6.9ರ ಮುನ್ಸೂಚನೆಗಿಂತ ಕಡಿಮೆಯಾಗಿದೆ. 2025-26ನೇ ಸಾಲಿಗೆ ಅಂದಾಜಿಸಲಾದ ಶೇ. 7.6ರ ಬೆಳವಣಿಗೆಗಿಂತಲೂ ಇದು ಕಡಿಮೆ. 2026-27ರಲ್ಲಿ ಹಣದುಬ್ಬರವು ಶೇ. 5.1ಕ್ಕೆ ಏರಿಕೆಯಾಗಲಿದೆ ಎಂದು ಮುನ್ಸೂಚನೆ ನೀಡಿದೆ. ಮೂರನೇ ತ್ರೈಮಾಸಿಕದಲ್ಲಿ ಅದು ಶೇ. 5.9ಕ್ಕೆ ಗರಿಷ್ಠ ಮಟ್ಟ ತಲುಪಿ ಬಳಿಕ ಇಳಿಕೆಯಾಗುವ ನಿರೀಕ್ಷೆಯಿದೆ. ಇದಕ್ಕೂ ಮೊದಲು ವಾರ್ಷಿಕ ಚಿಲ್ಲರೆ ಹಣದುಬ್ಬರವನ್ನು ಶೇ. 4.6 ಎಂದು ಅಂದಾಜಿಸಲಾಗಿತ್ತು. ಮೂಲಭೂತ ಹಣದುಬ್ಬರವನ್ನು ಶೇ. 4.7 ಎಂದು ಅಂದಾಜಿಸಲಾಗಿದ್ದು, ಇದು ಹಿಂದಿನ ಶೇ. 4.4ರ ಅಂದಾಜಿಗಿಂತ ಹೆಚ್ಚಾಗಿದೆ. ಒಟ್ಟಾರೆ ಹಣದುಬ್ಬರ ಯ ಶೇ. 4ರ ಗುರಿ ಮಿತಿಯೊಳಗೆ (ಶೇ. 2ರಿಂದ 6ರ ಸಹಿಷ್ಣುತೆ ವ್ಯಾಪ್ತಿಯಲ್ಲಿ) ಇದ್ದರೂ, ಜಾಗತಿಕ ಇಂಧನ ಬೆಲೆಗಳ ಏರಿಕೆ ಮತ್ತು ಸರಬರಾಜು ಆಘಾತಗಳು ವೇತನ ಹಾಗೂ ಹಣದುಬ್ಬರ ನಿರೀಕ್ಷೆಗಳ ಮೇಲೆ ದ್ವಿತೀಯ ಹಂತದ ಪರಿಣಾಮಗಳನ್ನು ಉಂಟುಮಾಡಬಹುದು ಎಂದು ಆರ್‌ಬಿಐಎಚ್ಚರಿಸಿದೆ.

## ವಿಶ್ವ ಪರಿಸರ ದಿನಾಚರಣೆ : ಕುರ್ಲಗೇರಿಯಲ್ಲಿ 10 ಸಸಿಗಳನ್ನು ನೆಟ್ಟು ಪರಿಸರ ಜಾಗೃತಿ ಮೂಡಿಸಿದ ತಾಪಂ ಇಓ ಶ್ರೀಧರ್ ಚಿನಗುಂಡಿ




ನರಗುಂದ: ವಿಶ್ವ ಪರಿಸರ ದಿನದ ಅಂಗವಾಗಿ ನರಗುಂದ ತಾಲೂಕಿನ ಬನಹಟ್ಟಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕುರ್ಲಗೇರಿ ಗ್ರಾಮದಲ್ಲಿ ತಾಲೂಕು ಪಂಚಾಯತ್ ನರಗುಂದ ಹಾಗೂ ಬನಹಟ್ಟಿ ಗ್ರಾಮ ಪಂಚಾಯಿತಿ ಸಂಯುಕ್ತ ಆಶ್ರಯದಲ್ಲಿ ಪರಿಸರ ದಿನಾಚರಣೆ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಕುರ್ಲಗೇರಿ ಗ್ರಾಮದ ಕುಡಿಯುವ ನೀರಿನ ಟ್ಯಾಂಕ್ ಆವರಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ನರಗುಂದ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಶ್ರೀಧರ್ ಚಿನಗುಂಡಿ ಅವರು 10 ಸಸಿಗಳನ್ನು ನೆಟ್ಟು ನೀರುಣಿಸುವ ಮೂಲಕ ಪರಿಸರ ದಿನಾಚರಣೆಗೆ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ಪರಿಸರ ದಿನವನ್ನು ಕೇವಲ ಆಚರಿಸಿದರೆ ಸಾಲದು, ಪರಿಸರ ಸಂರಕ್ಷಣೆಯನ್ನು ನಮ್ಮ ಜೀವನದ ಅವಿಭಾಜ್ಯ ಅಂಗವನ್ನಾಗಿ ರೂಢಿಸಿಕೊಳ್ಳಬೇಕು ಎಂದು ಹೇಳಿದರು. ಸಾರ್ವಜನಿಕರ ಸಹಕಾರವಿಲ್ಲದೆ ಪರಿಸರ ರಕ್ಷಣೆ ಸಾಧ್ಯವಿಲ್ಲ. ಇಂದು ನೆಟ್ಟಿರುವ ಸಸಿಗಳು ಬೆಳೆದು ಗ್ರಾಮಸ್ಥರು ಹಾಗೂ ಪ್ರಾಣಿ-ಪಕ್ಷಿಗಳಿಗೆ ನೆರಳು ನೀಡುವವರೆಗೂ ಅವುಗಳ ಸಂರಕ್ಷಣೆಯಲ್ಲಿ ಸಾರ್ವಜನಿಕರ ಪಾತ್ರ ಮಹತ್ವದ್ದಾಗಿದೆ ಎಂದು ತಿಳಿಸಿದರು. ಪರಿಸರ ಸಂರಕ್ಷಣೆ ಮಾತ್ರವಲ್ಲದೆ ಗ್ರಾಮಗಳ ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಹಾಗೂ ಅವುಗಳ ನಿರ್ವಹಣೆಯಲ್ಲಿಯೂ ಸಾರ್ವಜನಿಕರು ಗ್ರಾಮ ಪಂಚಾಯಿತಿಗೆ ಸಹಕಾರ ನೀಡಬೇಕು ಎಂದು ಅವರು ಕರೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಬನಹಟ್ಟಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಓ) ಮಂಜುನಾಥ ಗಣಿ ಅವರು, ಕುಡಿಯುವ ನೀರಿನ ಟ್ಯಾಂಕ್ ಆವರಣವನ್ನು ಸ್ವಚ್ಛಗೊಳಿಸಿ ನೈರ್ಮಲ್ಯ ಕಾಪಾಡುವಂತೆ ಗ್ರಾಮಸ್ಥರು ಮನವಿ ಮಾಡಿದ್ದರು. ಮನವಿ ಸ್ವೀಕರಿಸಿದ 15 ದಿನಗಳೊಳಗೆ ಸ್ಥಳವನ್ನು ಸ್ವಚ್ಛಗೊಳಿಸಲಾಗಿದ್ದು, ಇಂದು ಅದೇ ಸ್ಥಳದಲ್ಲಿ ಪರಿಸರ ದಿನಾಚರಣೆ ನಡೆಸುತ್ತಿರುವುದು ಸಂತಸದ ಸಂಗತಿ ಎಂದು ಹೇಳಿದರು. ಸಾರ್ವಜನಿಕರು ಇದೇ ರೀತಿಯ ಸಹಕಾರ ನೀಡಿದರೆ ಗ್ರಾಮದಲ್ಲಿ ಹಂತ ಹಂತವಾಗಿ ಇನ್ನಷ್ಟು ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ. ಗ್ರಾಮ ಪಂಚಾಯಿತಿ ವತಿಯಿಂದ ಕೈಗೊಂಡಿರುವ ಅಭಿವೃದ್ಧಿ ಕಾರ್ಯಗಳನ್ನು ಗ್ರಾಮಸ್ಥರು ಕಾಪಾಡಿಕೊಂಡು ಹೋಗಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಬನಹಟ್ಟಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಹೆಚ್.ಡಿ. ಪೂಜಾರ, ಗ್ರಾಮದ ಗಣ್ಯರಾದ ನಾಗಯ್ಯ ಹಿರೇಮಠ, ಗ್ರಾಮದ ಹಿರಿಯರಾದ ವಿರುಪಾಕ್ಷಪ್ಪ ಶಾನವಾಡ, ಶಿವರುದ್ರಪ್ಪ ಸುಳ್ಳದ, ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಮಾಳಪ್ಪ ಪೂಜಾರ, ಬಿಲ್ ಕಲೆಕ್ಟರ್ ಶಿವನಪ್ಪ ಕಲ್ಲಾಪೂರ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

ಜನಶ್ರೀ ಟೈಮ್ಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

## ಹಸಿರೇ ಉಸಿರು : ಬೆಳಘಟ್ಟಿ ಶಾಲೆಯಲ್ಲಿ ಅರ್ಥಪೂರ್ಣ ವಿಶ್ವ ಪರಿಸರ ದಿನಾಚರಣೆ

ಗದಗ: ತಾಲೂಕಿನ ಬೆಳಘಟ್ಟಿ ಸರ್ಕಾರಿ ಶಾಲೆಯಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಗದಗ ಡಯಟ್‌ನ ಉಪ ಪ್ರಾಂಶುಪಾಲರಾದ ಜಿ.ಎಂ. ಮಂದಿನಮನಿ ಅವರು ಶಾಲೆಗೆ ಭೇಟಿ ನೀಡಿ ಶೈಕ್ಷಣಿಕ ಹಾಗೂ ಆಡಳಿತಾತ್ಮಕ ಚಟುವಟಿಕೆಗಳ ಸಮಗ್ರ ಪರಿಶೀಲನೆ ನಡೆಸಿ ಮಾರ್ಗದರ್ಶನ ನೀಡಿದರು.

ಶಾಲೆಯ ದಾಖಲಾತಿ ಆಂದೋಲನ, ಪಾಲಕ-ಪೋಷಕರ ಮಹಾಸಭೆ, ವಾರ್ಷಿಕ ಕ್ರಿಯಾಯೋಜನೆ, ಸಂಯುಕ್ತ ವೇಳಾಪಟ್ಟಿ, ತರಗತಿವಾರು ಸಾಮರ್ಥ್ಯಗಳ ಪಟ್ಟಿ, ಸೇತುಬಂಧ ಕಾರ್ಯಕ್ರಮದ ಪೂರ್ವಸಿದ್ಧತೆ, ಶಾಲಾ ಮೈದಾನದ ಸ್ವಚ್ಛತೆ, ಬೋಧನಾ ಕೊಠಡಿಗಳ ನಿರ್ವಹಣೆ ಹಾಗೂ ವಿವಿಧ ಶೈಕ್ಷಣಿಕ ಚಟುವಟಿಕೆಗಳನ್ನು ಅವಲೋಕಿಸಿ ಶಿಕ್ಷಕರಿಗೆ ಅಗತ್ಯ ಸಲಹೆಗಳನ್ನು ನೀಡಿದರು.

ನಂತರ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಶಾಲಾ ಆವರಣದಲ್ಲಿ ಸಸಿ ನೆಡುವ ಕಾರ್ಯಕ್ರಮ ನಡೆಯಿತು. ಸಸಿಗಳನ್ನು ನೆಡುವ ಮೂಲಕ ಪರಿಸರ ಸಂರಕ್ಷಣೆಯ ಮಹತ್ವವನ್ನು ಮಕ್ಕಳಿಗೆ ತಿಳಿಸಲಾಯಿತು. ಈ ವೇಳೆ ಮಾತನಾಡಿದ ಜಿ.ಎಂ. ಮಂದಿನಮನಿ ಅವರು, "ಹಸಿರೇ ಉಸಿರು. ಪ್ರತಿಯೊಬ್ಬ ವಿದ್ಯಾರ್ಥಿಯೂ ಒಂದು ಗಿಡವನ್ನು ನೆಟ್ಟು ಅದರ ಪಾಲನೆ-ಪೋಷಣೆಯ ಜವಾಬ್ದಾರಿಯನ್ನು ವಹಿಸಬೇಕು. ಗಿಡಕ್ಕೆ ಮಗುವಿನ ಹೆಸರನ್ನೇ ನಾಮಕರಣ ಮಾಡಿ ಅದರ ಬೆಳವಣಿಗೆಯನ್ನು ಗಮನಿಸುವ ಮೂಲಕ ಪರಿಸರದ ಬಗ್ಗೆ ಕಾಳಜಿ ಮತ್ತು ಜವಾಬ್ದಾರಿಯನ್ನು ಬೆಳೆಸಬೇಕು" ಎಂದು ಹೇಳಿದರು.

ಜೂನ್ 5ರಂದು ಮಾತ್ರ ಸಸಿ ನೆಡುವುದರಿಂದ ಪರಿಸರ ಸಂರಕ್ಷಣೆ ಸಾಧ್ಯವಿಲ್ಲ. ವರ್ಷದ ಪ್ರತಿದಿನವೂ ಪರಿಸರದ ಬಗ್ಗೆ ಕಾಳಜಿ ವಹಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಗಿಡ-ಮರಗಳಿಂದ ದೊರೆಯುವ ಶುದ್ಧ ಗಾಳಿ, ನೆರಳು ಹಾಗೂ ಪರಿಸರ ಸಮತೋಲನದ ಮಹತ್ವವನ್ನು ಮಕ್ಕಳಿಗೆ ವಿವರಿಸಿದರು.



ಕಾರ್ಯಕ್ರಮದಲ್ಲಿ ಶಾಲೆಯ ಎಸ್‌ಡಿಎಂಸಿ ಅಧ್ಯಕ್ಷ ದೇವಪ್ಪ ಹಾಲಪ್ಪ ಕೋಟಿ, ಉಪಾಧ್ಯಕ್ಷೆ ಅನ್ನಪೂರ್ಣ ಸತ್ಯಪ್ಪ ಕಟ್ಟೆಣ್ಣವರ, ಎಸ್‌ಡಿಎಂಸಿ ಸದಸ್ಯರು, ಶಾಲೆಯ ಪ್ರಧಾನ ಗುರು ಅಣ್ಣಪ್ಪ ನೀಲಗಿರಿ, ಹಿರಿಯ ಶಿಕ್ಷಕರಾದ ನಾಗಪ್ಪ ಎಚ್. ಗೊಂದಿ ಹಾಗೂ ಆರ್.ವೈ. ಪಾಟೀಲ, ಅಕ್ಷರ ದಾಸೋಹ ಸಿಬ್ಬಂದಿಗಳಾದ ಪುಷ್ಪ ನಿಚ್ಚಳ ಮತ್ತು ಫಾತಿಮಾ ಬೇಗಂ ನೆಗಳೂರು ಸೇರಿದಂತೆ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದರು. ಸಸಿ ನೆಡುವ ಮೂಲಕ ವಿದ್ಯಾರ್ಥಿಗಳಲ್ಲಿ ಪರಿಸರ ಜಾಗೃತಿ ಮೂಡಿಸುವ ಉದ್ದೇಶದಿಂದ ಆಯೋಜಿಸಿದ್ದ ಕಾರ್ಯಕ್ರಮವು ಅರ್ಥಪೂರ್ಣವಾಗಿ ಹಾಗೂ ಉತ್ಸಾಹಭರಿತವಾಗಿ ನೆರವೇರಿತು.

## ಪರಿಸರ ಸಂರಕ್ಷಣೆ ಮಾಡುವುದು ನಮ್ಮೆಲ್ಲರ ಕರ್ತವ್ಯ ಪದವಿಧರ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಮಾರುತಿ ಮ್ಯಾಗಳಮನಿ

ಕೊಪ್ಪಳ: ನಗರದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಸರದಾರಗಲ್ಲಿ ಶಾಲೆಯಲ್ಲಿ ಇಂದು ವಿಶ್ವ ಪರಿಸರ ದಿನಾಚರಣೆಯನ್ನು ಸಸಿ ನೆಡುವುದರ ಮೂಲಕ ಆಚರಣೆ ಮಾಡಲಾಯಿತು, ಮುಖ್ಯೋಪಾಧ್ಯಯರಾದ ಮಂಜುನಾಥ್ ಬಿ ರವರು ಮಕ್ಕಳಿಗೆ ಪರಿಸರದ ರಕ್ಷಣೆಯ ಕುರಿತಾಗಿ ಹಲವಾರು ವಿಷಯಗಳನ್ನು ತಿಳಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಪದವೀಧರ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಮಾರುತಿ ಮ್ಯಾಗಳಮನಿ ಮಕ್ಕಳು ಹೆಚ್ಚು ಹೆಚ್ಚು ಗಿಡಗಳನ್ನು ಬೆಳೆಸಬೇಕು ಅದರಿಂದ ಮಾನವ ಸಂಕುಲ ಉಳಿಯುತ್ತದೆ ಹಾಗೂ ಮರಗಳನ್ನು ಕಡಿದು ಹಾಕುವುದು ಪ್ಲಾಸ್ಟಿಕ್ ಬಳಕೆ ಮತ್ತು ಕೈಗಾರಿಕಾ ತ್ಯಾಜ್ಯದಿಂದ ಪರಿಸರ ಹಾಳಾಗುತ್ತದೆ, ಪರಿಸರದ ಬಗ್ಗೆ ಜಾಗೃತಿ ಮೂಡಿಸುವುದಕ್ಕಾಗಿ ಪ್ರತಿ ವರ್ಷ ಜೂನ್ 5 ರಂದು ವಿಶ್ವ ಪರಿಸರ ದಿನಾಚರಣೆಯನ್ನು ಆಚರಣೆ ಮಾಡಲಾಗುತ್ತದೆ ಎಂದರು ಇದೇ ಸಂದರ್ಭದಲ್ಲಿ ಶಿಕ್ಷಕೀಯರಾದ ರತ್ನಮ್ಮ,ಪಲ್ಲವಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ಬಾಲ್ಯವಿವಾಹ ಮುಕ್ತ ಗ್ರಾಮಗಳ ನಿರ್ಮಾಣಕ್ಕೆ ಕೈಜೋಡಿಸಿ : ಹೇಮಂತಕುಮಾರ

ಕೊಪ್ಪಳ: ಗ್ರಾಮ ಮಟ್ಟದಲ್ಲಿ ಜಾಗೃತಿಯನ್ನು ಮೂಡಿಸಿ, ಬಾಲ್ಯವಿವಾಹದಿಂದ ಮಕ್ಕಳ ರಕ್ಷಣೆ, ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯಗಳ ತಡೆಗಟ್ಟುವ ಮೂಲಕ ಬಾಲ್ಯವಿವಾಹ ಮುಕ್ತ ಗ್ರಾಮಗಳನ್ನಾಸಲು ಪ್ರತಿಯೊಬ್ಬರು ಕೈಜೋಡಿಸಬೇಕೆಂದು ಹೆಚ್ಚುವರಿ ಜಿಲ್ಲಾ ಪೊಲೀಸ್ ಅಧೀಕ್ಷಕರಾದ ಹೇಮಂತಕುಮಾರ ಅವರು ಹೇಳಿದರು.

ಕೊಪ್ಪಳ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಂಯುಕ್ತಾಶ್ರಯದಲ್ಲಿ ಬುಧವಾರ (ಜೂ. 3 ರಂದು) ಕನಕಗಿರಿ ತಾಲ್ಲೂಕಿನ ಬಸರಿಹಾಳ ಗ್ರಾಮದಲ್ಲಿ ಸಾರ್ವಜನಿಕರಿಗೆ ಹಮ್ಮಿಕೊಳ್ಳಲಾಗಿದ್ದ "ಮಕ್ಕಳ ಹಕ್ಕುಗಳು, ಕಾನೂನುಗಳು ಮತ್ತು ಮಕ್ಕಳ ಸುರಕ್ಷತೆ ಕುರಿತು ಜಾಗೃತಿ ಕಾರ್ಯಕ್ರಮ" ಉದ್ಘಾಟಿಸಿ ಅವರು ಮಾಡಿದವರು.

ಭಾಗಿಯಾದವರು, ಪ್ರೋತ್ಸಾಹಿಸಿದವರು ಬಾಲ್ಯವಿವಾಹ ನಿಷೇಧ ಕಾಯ್ದೆ ಮತ್ತು ಈ ಕಾಯ್ದೆಯಡಿಲ್ಲಿ ಸಿಲುಕಿ ಜೈಲು ಶಿಕ್ಷೆಗೆ ಗುರಿಯಾಗಿರುವುದು ಸಹ ಜಿಲ್ಲೆಯಲ್ಲಿ ವರದಿಯಾಗಿವೆ. ಜಿಲ್ಲೆಯ ವಸತಿ ನಿಲಯಗಳಲ್ಲಿ ಅಪ್ರಾಪ್ತ ವಯಸ್ಸಿನ ಮಕ್ಕಳು, ಮಕ್ಕಳಿಗೆ ಜನ್ಮ ನೀಡಿದ ಪ್ರಕರಣಗಳು ವರದಿಯಾಗಿವೆ. ಇದು ಸಮುದಾಯಗಳಲ್ಲಿ ಇನ್ನೂ ಸಹ ಜಾಗೃತಿ, ಮಾಹಿತಿಯ ಕೊರತೆಯನ್ನು ತಿಳಿಸುತ್ತಿದೆ.



ರಾಷ್ಟ್ರೀಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಮೀಕ್ಷೆ-5ರಲ್ಲಿ ಅಪ್ರಾಪ್ತ ವಯಸ್ಸಿನಲ್ಲಿ ಮದುವೆಯಾದವರ ಪ್ರಮಾಣ ಜಿಲ್ಲೆಯಲ್ಲಿ 27% ಇದೆ. ಇದು ಕಳೆದ ಸಮೀಕ್ಷೆ-4ರಲ್ಲಿ ವರದಿಯಾದ ಪ್ರಮಾಣ 35.9% ಇದಿದ್ದು, ಇಳಿಕೆಯಾಗಿದ್ದರೂ ಸಹ ರಾಜ್ಯದಲ್ಲಿ ಅತಿ ಹೆಚ್ಚು ಬಾಲ್ಯವಿವಾಹಗಳು ಜರುಗುವ ಜಿಲ್ಲೆಗಳಲ್ಲಿ ಜಿಲ್ಲೆಯು ಒಂದಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಹಲವಾರು ಪ್ರಕರಣಗಳಲ್ಲಿ ಆರೋಪಿತರಿಗೆ ಶಿಕ್ಷೆಯಾಗಿದ್ದರು ಬಾಲ್ಯವಿವಾಹಗಳು ಜರುಗುತ್ತಿರುವುದು ವಿಪರ್ಯಾಸಕರವಾಗಿದೆ. ಆದ್ದರಿಂದ ಗ್ರಾಮ ಮಟ್ಟದಲ್ಲಿ ಜಾಗೃತಿಯನ್ನು ಮೂಡಿಸಿ ತನ್ಮೂಲಕ ಮಕ್ಕಳನ್ನು ಬಾಲ್ಯವಿವಾಹದಿಂದ ರಕ್ಷಣೆ, ಮಕ್ಕಳ ಮೇಲಾಗುವ ಲೈಂಗಿಕ ದೌರ್ಜನ್ಯಗಳಿಂದ ಅವರ ರಕ್ಷಣೆ ಹಾಗೂ ಬಾಲ್ಯವಿವಾಹಗಳಿಂದ ಗ್ರಾಮಗಳನ್ನು ಮುಕ್ತಗೊಳಿಸುವುದು ಸರ್ಕಾರ, ಸಮುದಯ ಮತ್ತು ಪಾಲರದ್ದೂ ಸಹ ಜವಾಬ್ದಾರಿಯಾಗಿದ್ದು, ಈ ಕುರಿತು ಮಾಹಿತಿ ನೀಡಲು ಇಂತಹ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ. ಸಾರ್ವಜನಿಕರು ಇದರ ಉಪಯೋಗಪಡೆಯುವ ಮೂಲಕ ಮಕ್ಕಳನ್ನು ರಕ್ಷಣೆ ಮಾಡುವಂತೆ ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಗಂಗಾವತಿ ಪೊಲೀಸ್ ಉಪ ಅಧೀಕ್ಷಕರಾದ ನ್ಯಾಮಗೌಡ ಅವರು ಮಾತನಾಡಿ, ಮಕ್ಕಳ ಮೇಲಿನ ಲೈಂಗಿಕ ಅಪರಾಧಗಳನ್ನು ತಡೆಗಟ್ಟಲು ಸರಕಾರವು ವಿವಿಧ ಕಾನೂನುಗಳನ್ನು ಜಾರಿಯಲ್ಲಿ ತಂದಿರುತ್ತದೆ. ಅವುಗಳಲ್ಲಿ ಲೈಂಗಿಕ ಅಪರಾಧಗಳಿಂದ ಮಕ್ಕಳ ಸಂರಕ್ಷಣಾ ಕಾಯ್ದೆ-2012 ತಿದ್ದುಪಡಿ-2019 ಪ್ರಮುಖವಾದದ್ದು. ಈ ಕಾಯ್ದೆಯನ್ವಯ 18 ವರ್ಷದೊಳಗಿನ ಮಕ್ಕಳ ಮೇಲಿನ ಬೇಧಕ ಲೈಂಗಿಕ ಹಲ್ಲೆಗೆ ಕನಿಷ್ಠ 20 ವರ್ಷಗಳಿಂದ ಅಜೀವ ಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸಬಹುದಾಗಿದೆ. ಲೈಂಗಿಕ ಕಿರುಕುಳ ಅಂದರೆ ಮಕ್ಕಳಿಗೆ ಶಾಬ್ಧಿಕ, ಅಂಗಿಕ, ಭಾಷಿಕ ಹಾಗೂ ಲಿಖಿತವಾಗಿ ಅವರ ಘನತೆಗೆ ಧಕ್ಕೆ ಉಂಟುಮಾಡಬಹುದಾದ ಯಾವುದೇ ಈ ರೀತಿಯ ಕೃತ್ಯಗಳಾಗಿವೆ. ಈ ಕೃತ್ಯಗಳಿಗೆ 7 ವರ್ಷಗಳವರೆಗೆ ಜೈಲು ಶಿಕ್ಷೆ ಮತ್ತು ದಂಡವನ್ನು ವಿಧಿಸಬಹುದಾಗಿದೆ. ಈ ರೀತಿಯ ಕೃತ್ಯಗಳಿಗೆ ಸಹಾಯ, ಪ್ರೋತ್ಸಾಹ ನೀಡಿದವರಿಗೂ ಮತ್ತು ಪ್ರಯತ್ನಪಟ್ಟವರಿಗೂ ಸಹ ಅಷ್ಟೇ ಪ್ರಮಾಣದ ಶಿಕ್ಷೆಯನ್ನು ವಿಧಿಸಬಹುದಾಗಿದೆ. ಮಾಧ್ಯಮಗಳ ಪ್ರಭಾವದಿಂದ ಪ್ರೀತಿ, ಪ್ರೇಮದ ಹೆಸರಿನಲ್ಲಿ ಮಕ್ಕಳು ತಿಳಿದೊ, ತಿಳಿಯದೆಯೋ ಈ ಕಾಯ್ದೆಯಲ್ಲಿ ಸಿಲುಕುತ್ತಿದ್ದಾರೆ. ಮನೆಯಲ್ಲಿನ ಸಣ್ಣ ಮಕ್ಕಳನ್ನು ಕುಟುಂಬದಲ್ಲಿನ ಸದಸ್ಯರೇ ಲೈಂಗಿಕವಾಗಿ ದುರ್ಬಳಕೆ ಮಾಡುತ್ತಿರುವ ಪ್ರಕರಣಗಳು ವರದಿಯಾಗಿವೆ. ಆದ್ದರಿಂದ ಮಕ್ಕಳ ದೇಹದ ಭಾಗಗಳಲ್ಲಿ ಸುರಕ್ಷಿತ ಮತ್ತು ಅಸುರಕ್ಷಿತ ಸ್ಪರ್ಷಗಳ ಕುರಿತು ಜಾಗೃತಿ ಮೂಡಿಸುವಂತೆ ಸಾರ್ವಜನಿಕರಿಗೆ ಮಾಹಿತಿ ನೀಡಿದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳಾದ ಸಿಂಧು ಅಂಗಡಿ ಅವರು ಮಾತನಾಡಿ, ಜಿಲ್ಲೆಯಲ್ಲಿ ಮಕ್ಕಳನ್ನು ಎಲ್ಲೆಂದರಲ್ಲಿ ತೊರೆದು ಹೋಗಿ ಮಕ್ಕಳ ಪ್ರಾಣಕ್ಕೆ ಕುತ್ತು ತಂದ ಪ್ರಕರಣಗಳು ಸಹ ವರದಿಯಾಗಿವೆ. ಮಕ್ಕಳ ನ್ಯಾಯ(ಮಕ್ಕಳ ಪೋಷಣೆ ಮತ್ತು ರಕ್ಷಣೆ) ಕಾಯ್ದೆ-2015ರಡಿಯಲ್ಲಿ ಮಗು ಬೇಡವಾದಲ್ಲಿ ಅಂತಹ ಮಗುವನ್ನು ಎಲ್ಲೆಂದರಲ್ಲಿ ಬಿಸಾಡಿ ಮಗುವಿನ ಪ್ರಾಣಕ್ಕೆ ಎರವಾಗದೇ, ಅಂತಹ ಮಗುವನ್ನು 1098 ಮೂಲಕ ಅಥವಾ ನೇರವಾಗಿ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯ ವಶಕ್ಕೆ ನೀಡಬಹುದಾಗಿದೆ. ನಂತರ ಸಮಿತಿಯು ಆ ಮಗುವನ್ನು ಕುಟುಂಬದ ವಾತಾವರಣದಲ್ಲಿ ಬೆಳೆಸಲು ಅಗತ್ಯ ಪುನರವಸತಿಗಳನ್ನು ನಿಯಮಾನುಸಾರ ಕೈಗೊಳ್ಳುತ್ತದೆ. ಅಕ್ರಮ ದತ್ತು ಶಿಕ್ಷಾರ್ಹ ಅಪರಾಧವಾಗಿದೆ.

2ನೇ ಪುಟಕ್ಕೆ....

1ನೇ ಪುಟದಿಂದ....

## ಬಾಲ್ಯವಿವಾಹ ಮುಕ್ತ ಗ್ರಾಮಗಳ ನಿರ್ಮಾಣಕ್ಕೆ ಕೈಜೋಡಿಸಿ : ಹೇಮಂತಕುಮಾರ



ನಿಯಮಬಾಹಿರವಾಗಿ ದತ್ತು ಪಡೆದಲ್ಲಿ ಅಂತಹ ಪಾಲಕರು ಮತ್ತು ದತ್ತು ನೀಡಿದ ಪೋಷಕರಿಗೂ ಸಹ ಶಿಕ್ಷೆಯನ್ನು ವಿಧಿಸಬಹುದಾಗಿದ್ದು, ಆದ್ದರಿಂದ ಬೇಡವಾದ ಶಿಶುಗಳನ್ನು ಎಲ್ಲಂದರಲ್ಲಿ ಬಿಸಾಡದೇ ಮಮತೆಯ ತೊಟ್ಟಿಲಿನಲ್ಲಿ ಹಾಕಿ ಅಥವಾ ಮಕ್ಕಳ ಸಹಾಯವಾಣಿ-1098ಕ್ಕೆ ಕರೆ ಮಾಡುವ ಮೂಲಕ ಅಂತಹ ಮಕ್ಕಳನ್ನು ಕಾನೂನುಬದ್ಧ ದತ್ತು ಪ್ರಕ್ರೀಯೆ ಮೂಲಕ ಕುಟುಂಬದ ವಾತಾವರಣವನ್ನು ನಿರ್ಮಸಲು ಸಹಕರಿಸುವಂತೆ ಸಾರ್ವಜನಿಕರಿಗೆ ಮಾಹಿತಿ ನೀಡಿದರು.

ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಂಪನ್ಮೂಲ ವ್ಯಕ್ತಿಗಳಾದ ಶಿವಲೀಲಾ ವನ್ನೂರು ಅವರು ಮಾತನಾಡಿ, 18 ವರ್ಷದೊಳಗಿನ ಮಕ್ಕಳು ಮಾದಕ ವ್ಯಸನಕ್ಕೊಳಗಾಗುತ್ತಿದ್ದಾರೆ. ವಾಹನ ಪರವಾನಿಗೆ ಇಲ್ಲದೇ ಅಸುರಕ್ಷಿತ ಚಾಲನೆ ಮಾಡಿ ಅಪಘಾತಗಳ ಪ್ರಮಾಣ ಏರಿಕೆಯಗುತ್ತಿದ್ದು, ಇದರಿಂದ ಮಕ್ಕಳು ಮತ್ತು ವಯಸ್ಕರ ಜೀವಹಾನಿಯಾಗುತ್ತಿರುವುದು ವಿಷಾದನೀಯ. ಅಲ್ಲದೇ ಅಪ್ರಾಪ್ತ ವಯಸ್ಸಿನ ಮಕ್ಕಳು ಕಳ್ಳತನ ಮತ್ತು ಕೊಲೆ ಪ್ರಕರಣಗಳಲ್ಲಿ ಭಾಗಿಯಾಗುತ್ತಿರುವುದು ಹಾಗೂ ಪೋಕ್ಸೋ ಪ್ರಕರಣಗಳಲ್ಲಿಯೂ ಸಹ 18 ರಿಂದ 21 ವಯಸ್ಕ ಪುರುಷರು ಜೀವಾವಧಿ ಶಿಕ್ಷೆಯ ಪ್ರಮಾಣವನ್ನು ಅನುಭವಿಸುವಂತಹ ಘಟನೆಗಳು ವರದಿಯಾಗಿವೆ. ಆದ್ದರಿಂದ ಪಾಲಕರು ಮಕ್ಕಳ ಚಲನ-ವಲನಗಳ ಮೇಲೆ ನಿಗಾವಹಿಸಿ ಅವರಿಗೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಿ, ಮಕ್ಕಳ ಮೇಲೆ ಹೆಚ್ಚು ಪ್ರೀತಿ, ಕಾಳಜಿಯನ್ನುವಹಿಸುವ ಮೂಲಕ ಮಕ್ಕಳು ಅಪಾಯದ ಅಂಚಿಗೆ ಸಿಲುಕುವ ಸಂದರ್ಭಗಳಿಂದ ಕಾಪಾಡುವ ಜವಾಬ್ದಾರಿ ನಮ್ಮ-ನಿಮ್ಮೆಲ್ಲರದ್ದಾಗಿದೆ ಎಂದು ಮಾಹಿತಿ ನೀಡಿದರು.ಈ ಕಾರ್ಯಕ್ರಮದಲ್ಲಿ ಮಕ್ಕಳ ಕಾನೂನುಗಳ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸುವ ಉದ್ದೇಶವನ್ನು ಪ್ರಾಸ್ತಾವಿಕವಾಗಿ ಕನಕಗಿರಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾದ ವಿರುಪಾಕ್ಷ ಸ್ವಾಮಿ ಅವರು ಮಾತನಾಡಿದರು.


ಕನಕಗಿರಿ ವಲಯದ ವೃತ್ತ ನಿರೀಕ್ಷಕರಾದ ನಾರಾಯಣ, ಕನಕಗಿರಿ ತಾಲ್ಲೂಕು ಪಂಚಾಯತ್ ಸಹಾಯಕ ನಿರ್ದೇಶಕರಾದ ನಾಗೇಶ ಎಚ್., ಅಂಗನವಾಡಿ ಮೇಲ್ವಿಚಾರಕರಾದ ಚಂದ್ರಕಲಾ, ಬಸರಿಹಳ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಕಾರಿಗಳಾದ ಬಸವರಾಜ ಸಂಕನಾಳ, ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಪರಶುರಾಮ ವಜ್ರಬಂಡಿ, ಬಸರಿಹಾಳ ಸ.ಹಿ.ಪ್ರಾ.ಶಾಲೆ ಮುಖ್ಯೋಪಾಧ್ಯಾಯರಾದ ಧರ್ಮಣ್ಣ ಸೇರಿದಂತೆ ಗ್ರಾಮ ಪಂಚಾಯತ್‌ನ ನಿಕಟಪೂರ್ವ ಸರ್ವಸದಸ್ಯರು, ಅಂಗನವಾಡಿ ಕಾರ್ಯಕರ್ತರು, ಅಕ್ಕಪಡೆ ಪೊಲೀಸ್ ಸಿಬ್ಬಂದಿಗಳು, ಆಶಾ ಕಾರ್ಯಕರ್ತೆಯರು ಗ್ರಾಮದ ಮಹಿಳೆಯರು & ಊರಿನ ಮುಖಂಡರು ಹಾಗೂ ಮಕ್ಕಳು ಭಾಗವಹಿಸಿದ್ದರು. ಕಾರ್ಯಕ್ರಮದ ನಿರೂಪಣೆ ಮತ್ತು ಪ್ರಾರ್ಥನೆಯನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಮಾಜ ಕಾರ್ಯಕರ್ತರಾದ ಪ್ರತಿಭಾ ಕಾಶಿಮಠ ಅವರು ನೆರವೇರಿಸಿದರು. ಸ್ವಾಗವನ್ನು ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ರಕ್ಷಣಾಧಿಕಾರಿ(ಸಾಂಸ್ಥಿಕ) ರವಿ ಬಡಿಗೇರ ಅವರು ಮತ್ತು ವಂದನಾರ್ಪಣೆಯನ್ನು ಮಕ್ಕಳ ಸಹಾಯವಾಣಿ-1098ರ ಸಂಯೋಜಕರಾದ ಶರಣಪ್ಪ ಸಿಂಗನಾಳ ಅವರು ನೆರವೇರಿಸಿದರು.

# ಚುರುಕುಗೊಂಡ ಮುಂಗಾರು, ರಾಜ್ಯದಾದ್ಯಂತ ಅಬ್ಬರಿಸಲಿದೆ ಮಳೆ, ಹವಾಮಾನ ಇಲಾಖೆ ಮುನ್ಸೂಚನೆ

**ಬೆಂಗಳೂರು:** ರಾಜ್ಯದಲ್ಲಿ ನೈಋತ್ಯ ಮುಂಗಾರು ಚುರುಕುಗೊಳ್ಳುತ್ತಿದ್ದು, ರಾಜ್ಯದಾದ್ಯಂತ ಮಳೆಯ ಆರ್ಭಟ ಜೋರಾಗಲಿದೆ ಎಂದು ಹವಾಮಾನ ಇಲಾಖೆ ಮತ್ತು ರಾಜ್ಯ ನೈಸರ್ಗಿಕ ವಿಕೋಪ ಮೇಲ್ವಿಚಾರಣಾ ಕೇಂದ್ರ ಎಚ್ಚರಿಕೆ ನೀಡಿದೆ.ರಾಜ್ಯದ ವಿವಿಧ ಭಾಗಗಳಲ್ಲಿ ಮುಂದಿನ ಕೆಲವು ದಿನಗಳ ಕಾಲ ಮಳೆಯ ಅಬ್ಬರ ಮುಂದುವರಿಯಲಿದ್ದು, ಜೂನ್ 9ರವರೆಗೆ ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಹಾಗೂ ಕರಾವಳಿ ಭಾಗಗಳ ಹಲವು ಜಿಲ್ಲೆಗಳಲ್ಲಿ ಗುಡುಗು, ಮಿಂಚು ಮತ್ತು ಬಿರುಗಾಳಿಯೊಂದಿಗೆ ಮಳೆಯಾಗುವ ಸಾಧ್ಯತೆ ಇರುವುದರಿಂದ ಸಾರ್ವಜನಿಕರು ಎಚ್ಚರಿಕೆಯಿಂದ ಇರಲು ಸೂಚಿಸಲಾಗಿದೆ. ರಾಜ್ಯದ ಹಲವು ಜಿಲ್ಲೆಗಳಲ್ಲಿ ಈಗಾಗಲೇ ಮುಂಗಾರು ಚುರುಕುಗೊಂಡಿದ್ದು, ಮುಂದಿನ 24 ಗಂಟೆಗಳಲ್ಲಿ ಕೆಲವೆಡೆ ಭಾರೀ ಮಳೆಯಾಗುವ ಸಾಧ್ಯತೆ ಇದೆ. ಈ ಹಿನ್ನೆಲೆ ಉತ್ತರ ಮತ್ತು ಕಲ್ಯಾಣ ಕರ್ನಾಟಕ ಭಾಗದ 11 ಜಿಲ್ಲೆಗಳಿಗೆ ಹವಾಮಾನ ಇಲಾಖೆ ಆರೆಂಜ್ ಅಲರ್ಟ್ ಘೋಷಿಸಿದೆ. ಭಾರೀ ಮಳೆಯ ಜೊತೆಗೆ ಗಾಳಿ ಬೀಸುವ ಸಾಧ್ಯತೆ ಇರುವುದರಿಂದ ರೈತರು, ವಾಹನ ಸವಾರರು ಹಾಗೂ ಸಾರ್ವಜನಿಕರು ಅಗತ್ಯ ಮುನ್ನೆಚ್ಚರಿಕೆ ವಹಿಸುವಂತೆ ಸೂಚಿಸಲಾಗಿದೆ.

ಜೂನ್ 4ರಿಂದ 12ರವರೆಗೆ ಕರಾವಳಿ, ಮಲೆನಾಡು ಮತ್ತು ಉತ್ತರ ಒಳನಾಡು ಜಿಲ್ಲೆಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇದೆ. ಗುಡುಗು, ಮಿಂಚು ಮತ್ತು ಗಂಟೆಗೆ 60 ಕಿ.ಮೀ ವೇಗದ ಬಿರುಗಾಳಿ ಸಹಿತ ಮಳೆಯಾಗುವ ನಿರೀಕ್ಷೆಯಿದೆ.



ನಾಳೆಯಿಂದ 9ರವರೆಗೆ ರಾಜ್ಯದಲ್ಲಿ ವ್ಯಾಪಕ ಮಳೆಯಾಗುವ ಸಾಧ್ಯತೆ ಇದೆ. ಮಲೆನಾಡು ಪ್ರದೇಶಗಳಾದ ಕೊಡಗು, ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಜೂನ್ 7ರಿಂದ 9ರವರೆಗೆ ಮಧ್ಯಮದಿಂದ ಭಾರೀ ಮಳೆಯಾಗುವ ಸೂಚನೆ ಇದೆ. ಉತ್ತರ ಕರ್ನಾಟಕದ ಬೆಳಗಾವಿ, ಹಾವೇರಿ, ಬಾಗಲಕೋಟೆ, ಕೊಪ್ಪಳ, ರಾಯಚೂರು ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಜೂನ್ 5ರವರೆಗೆ ಗಂಟೆಗೆ 40-50 ಕಿ.ಮೀ ವೇಗದ ಬಲವಾದ ಗಾಳಿ ಮತ್ತು ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ. ಕರಾವಳಿ ಜಿಲ್ಲೆಗಳಾದ ಉಡುಪಿ, ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡದಲ್ಲಿ ಮುಂಗಾರು ರೀತಿಯ ಮಳೆ ಆರಂಭವಾಗಿದೆ. ಜೂನ್ 8ರಿಂದ ರಾಜ್ಯದಲ್ಲಿ ಮುಂಗಾರು ಮಳೆಯ ಅಬ್ಬರ ಇನ್ನಷ್ಟು ಹೆಚ್ಚಾಗುವ ಲಕ್ಷಣಗಳಿವೆ. ಅರಬ್ಬಿ ಸಮುದ್ರದಲ್ಲಿ ಮುಂಗಾರಿಗೆ ಪೂರಕ ವಾತಾವರಣ ನಿರ್ಮಾಣವಾಗುತ್ತಿದ್ದು, ಜೂನ್ 12ರವರೆಗೆ ಉತ್ತಮ ಮಳೆಯ ಸಾಧ್ಯತೆ ಗೋಚರಿಸುತ್ತಿದೆ. ಹವಾಮಾನ ಇಲಾಖೆಯು ಜನಸಾಮಾನ್ಯರಿಗೆ ಮುನ್ನೆಚ್ಚರಿಕೆ ಸೂಚಿಸಿದೆ. ತಗ್ಗು ಪ್ರದೇಶಗಳಲ್ಲಿ ನೀರು ನಿಲ್ಲುವ ಸಾಧ್ಯತೆ ಇರುವುದರಿಂದ ರೈತರು ಮತ್ತು ನಿವಾಸಿಗಳು ಎಚ್ಚರಿಕೆ ವಹಿಸಬೇಕು. ಮೀನುಗಾರರು ಸಮುದ್ರಕ್ಕೆ ಹೋಗುವುದನ್ನು ತಡೆಯುವಂತೆ ಸೂಚಿಸಲಾಗಿದೆ. ಸಂಜೆ ಮತ್ತು ರಾತ್ರಿ ಸಮಯದಲ್ಲಿ ಗುಡುಗು-ಮಿಂಚು ಹೆಚ್ಚಾಗುವುದರಿಂದ ಮರಗಳ ಕೆಳಗೆ ಆಶ್ರಯ ಪಡೆಯುವುದನ್ನು ತಪ್ಪಿಸಿ, ಸುರಕ್ಷಿತ ಸ್ಥಳಗಳಲ್ಲಿ ಇರುವುದು ಉತ್ತಮ.

ಈ ಮುಂಗಾರು ಮಳೆಯು ಕೃಷಿ ಚಟುವಟಿಕೆಗಳಿಗೆ ಒಳ್ಳೆಯದಾಗಿದ್ದರೂ, ಬಿರುಗಾಳಿ ಮತ್ತು ಗುಡುಗು ಮಳೆಯಿಂದಾಗಿ ಜನಜೀವನಕ್ಕೆ ಅಡೆತಡೆಯಾಗುವ ಸಾಧ್ಯತೆ ಇದೆ. ಆದ್ದರಿಂದ ಪ್ರತಿಯೊಬ್ಬರೂ ಹವಾಮಾನ ವರದಿಗಳನ್ನು ನಿರಂತರವಾಗಿ ಗಮನಿಸುತ್ತಾ ಜಾಗರೂಕರಾಗಿರುವುದು ಅಗತ್ಯವಾಗಿದೆ.

11 ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಭಾಗದ ಹಲವು ಜಿಲ್ಲೆಗಳಲ್ಲಿ ಧಾರಾಕಾರ ಮಳೆಯಾಗುವ ನಿರೀಕ್ಷೆ ಇದೆ. ಈ ಹಿನ್ನೆಲೆ ಬೀದರ್, ಕಲಬುರಗಿ, ವಿಜಯಪುರ, ಯಾದಗಿರಿ, ಬಾಗಲಕೋಟೆ, ಬೆಳಗಾವಿ, ರಾಯಚೂರು, ಕೊಪ್ಪಳ, ಗದಗ, ಧಾರವಾಡ ಹಾಗೂ ಹಾವೇರಿ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ.

ಈ ಜಿಲ್ಲೆಗಳಲ್ಲಿ ಗುಡುಗು-ಮಿಂಚಿನೊಂದಿಗೆ ಭಾರೀ ಮಳೆಯಾಗುವ ಸಾಧ್ಯತೆ ಇದ್ದು, ತಗ್ಗು ಪ್ರದೇಶಗಳಲ್ಲಿ ನೀರು ನಿಲ್ಲುವ ಸಾಧ್ಯತೆಯೂ ಇದೆ. ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವ ರೈತರು ಹವಾಮಾನ ಇಲಾಖೆಯ ಮಾಹಿತಿ ಗಮನಿಸಿ ಕ್ರಮ ಕೈಗೊಳ್ಳುವಂತೆ ಸಲಹೆ ನೀಡಲಾಗಿದೆ.

ಕರಾವಳಿ ಭಾಗಗಳಲ್ಲಿ ಸಮುದ್ರದಲ್ಲಿ ಅಲೆಗಳ ಅಬ್ಬರ ಹೆಚ್ಚಾಗುವ ಸಾಧ್ಯತೆ ಇರುವುದರಿಂದ ಮೀನುಗಾರರು ಹವಾಮಾನ ಇಲಾಖೆಯ ಸೂಚನೆಗಳನ್ನು ಪಾಲಿಸುವಂತೆ ಮನವಿ ಮಾಡಲಾಗಿದೆ.ಹವಾಮಾನ ಇಲಾಖೆಯ ಪ್ರಕಾರ ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ ಹಾಗೂ ಕರಾವಳಿ ಭಾಗಗಳ ಕೆಲವು ಪ್ರದೇಶಗಳಲ್ಲಿ ಗುಡುಗು-ಮಿಂಚಿನೊಂದಿಗೆ ಆಲಿಕಲ್ಲು ಮಳೆಯಾಗು ಸಾಧ್ಯತೆ ಇದೆ. ಇದರಿಂದ ಕೃಷಿ ಬೆಳೆಗಳಿಗೆ ಹಾನಿಯಾಗುವುದರಿಂದ ರೈತರು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಲಾಗಿದೆ.

## ಡಿಕೆಶಿಯವರಿಗೆ ದೇವರು ಎಲ್ಲವನ್ನೂ ಕೊಟ್ಟಿದ್ದಾನೆ, ಈಗಲಾದರೂ ರಾಜ್ಯದ ಹಿತಾಸಕ್ತಿಗೆ ಕೆಲಸ ಮಾಡಲಿ : ಸಿ.ಟಿ.ರವಿ

**ಚಿಕ್ಕಮಗಳೂರು:** ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಅಗಾಧವಾದ ರಾಜಕೀಯ ಅನುಭವವೂ ಇದೆ, ಹುರುಪೂ ಇದೆ. ಆದರೆ, ಕೊರತೆ ಇರುವುದು ಇಚ್ಛಾಶಕ್ತಿ ಮಾತ್ರ ಎಂದು ವಿಧಾನ ಪರಿಷತ್ ಸದಸ್ಯ ಡಾ.ಸಿ.ಟಿ.ರವಿ ಹೇಳಿದರು.

ನೂತನ ಮುಖ್ಯಮಂತ್ರಿ ಪ್ರಮಾಣವಚನದ ಕುರಿತಂತೆ ಮಾಧ್ಯಮಗಳೊಡನೆ ಮಾತನಾಡಿದ ಅವರು ಡಿ.ಕೆ ಶಿವಕುಮಾರ್ ಅವರಿಗೆ ರಾಜ್ಯದ ಹಿತಾಸಕ್ತಿ ಆದ್ಯತೆಯ ವಿಷಯವಾಗಲಿ, ಅಭಿವೃದ್ಧಿಗೆ ಆದ್ಯತೆ ಸಿಗಲಿ. ನಿರುದ್ಯೋಗಿ ಯುವಕರಿಗೆ ಉದ್ಯೋಗ ಅವಕಾಶಗಳನ್ನು ಸೃಷ್ಟಿ ಮಾಡುವ ದೂರದೃಷ್ಟಿಯ ಯೋಜನೆಗಳು ಜಾರಿಗೆ ಬರಲಿ. ಸಾಮಾಜಿಕ ಅನ್ಯಾಯ ಆಗದಂತೆ ನೋಡಿಕೊಳ್ಳಿ ಎಂದು ಸಲಹೆ ನೀಡಿದರು.

ರಾಜಕೀಯ ಹಿತಾಸಕ್ತಿ ರಾಜ್ಯದ ಹಿತಾಸಕ್ತಿಯನ್ನು ಮೀರದೆ, ಅಭಿವೃದ್ಧಿ ಕಾರ್ಯಗಳಾಗಲಿ ಎಂದು ಹಾರೈಸಿದರು. ಕಾಂಗ್ರೆಸ್ ಪಾರ್ಟಿ ಎಲ್ಲಿಯವರೆಗೆ ತನ್ನ ನೀತಿಯನ್ನು ಬದಲಿಸಿಕೊಳ್ಳುವುದಿಲ್ಲವೋ, ಅಲ್ಲಿಯವರೆಗೆ ತುಷ್ಟೀಕರಣದ ರಾಜಕಾರಣ ಮುಂದುವರೆಯುತ್ತದೆ.ಹಣವೇ ಪ್ರಧಾನವಾದಾಗ ಆಡಳಿತದಲ್ಲಿ ಬಿಗಿ ತಪ್ಪುತ್ತದೆ. ಹಾಗಾಗದಂತೆ ಎಚ್ಚರ ವಹಿಸಿ ಜನ ಮನ್ನಣೆಯನ್ನು ಪಡೆಯಲಿ ಎಂದು ಹಾರೈಸುತ್ತೇನೆ ಎಂದರು.

ದೇವರು ಶಿವಕುಮಾರ್ ಅವರಿಗೆ ಎಲ್ಲವನ್ನೂ



ಕೊಟ್ಟಿದ್ದಾನೆ. ಇನ್ನು ಅವರು ವೈಯಕ್ತಿಕ ಹಿತಾಸಕ್ತಿಯ ರಕ್ಷಣೆಗೆ ಏನೂ ಮಾಡಬೇಕಾಗಿಲ್ಲ. ಈಗ ಅವರು ಒಬ್ಬ ಮುಖ್ಯಮಂತ್ರಿಯಾಗಿ ರಾಜ್ಯದ ಅಭಿವೃದ್ಧಿಗೆ ಆದ್ಯತೆ ಕೊಡಬೇಕು.

ಸಾಮಾಜಿಕ ಅನ್ಯಾಯ ಆಗದಂತೆ ನೋಡಿಕೊಳ್ಳಬೇಕು, ಸಣ್ಣ ಸಣ್ಣ ಸಮುದಾಯಗಳಿಗೂ ಕೂಡ ವಿಶ್ವಾಸ ಮೂಡಿಸುವ ಕೆಲಸ ಆಗಬೇಕು.ಭ್ರಷ್ಟಾಚಾರ ಮುಕ್ತ ಆಡಳಿತ ಬರಬೇಕು ಎನ್ನುವುದು ರಾಜ್ಯದ ಜನರ ಬಯಕೆ.ಮುಂದಿನ ಎರಡು ವರ್ಷದಲ್ಲಿ ಒಳ್ಳೆಯ ದಾರಿಗೆ ತೆಗೆದುಕೊಂಡು ಹೋಗುತ್ತಾರಾ ಎನ್ನುವುದು ನಮ್ಮೆಲ್ಲರ ಮನಸ್ಸಿನಲ್ಲಿರುವಂತಹ ಪ್ರಶ್ನೆಯಾಗಿದ್ದು, ಮುಂದಿನದ್ದನ್ನು ಕಾದು ನೋಡೋಣ ಎಂದರು.

## ಪ್ರತಿಷ್ಠಿತ ಶಾಲೆಗಳಿಗೆ ಪ್ರವೇಶಕ್ಕೆ ತಾತ್ಕಾಲಿಕ ಆಯ್ಕೆ ಪಟ್ಟಿ ಪ್ರಕಟ : ಆಕ್ಷೇಪಣೆ ಆಹ್ವಾನ

**ಕೊಪ್ಪಳ:** 2026-27ನೇ ಸಾಲಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿ/ವಿದ್ಯಾರ್ಥಿನಿಯರನ್ನು 6ನೇ ತರಗತಿಗೆ ಪ್ರತಿಷ್ಠಿತ ಶಾಲೆಗಳಿಗೆ ಪ್ರವೇಶ ಕಲ್ಪಿಸಲು ಪ್ರವೇಶ ಪರೀಕ್ಷೆಯಲ್ಲಿ ಪಡೆದ ಅಂಕಗಳ ಮೆರಿಟ್ ಆಧಾರದ ಮೇಲೆ ಅರ್ಹ ವಿದ್ಯಾರ್ಥಿ/ವಿದ್ಯಾರ್ಥಿನಿಯರ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಪ್ರಕಟಿಸಲಾಗಿದ್ದು, ಆಕ್ಷೇಪಣೆಗಳನ್ನು ಆಹ್ವಾನಿಸಲಾಗಿದೆ.

ಸಾರ್ವಜನಿಕರ ಮಾಹಿತಿಗಾಗಿ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೊಪ್ಪಳ ರವರ ಕಛೇರಿಯ ಮುಂಭಾಗದಲ್ಲಿ ಹಾಗೂ ಕೊಪ್ಪಳ ಜಿಲ್ಲಾ ವೆಬ್ ತಾಣ www.koppal.nic.in ದಲ್ಲಿ ಪ್ರಕಟಿಸಲಾಗಿದೆ. ತಾತ್ಕಾಲಿಕ ಆಯ್ಕೆಪಟ್ಟಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ದೂರುಗಳೇನಾದರೂ ಇದ್ದಲ್ಲಿ ಜೂನ್ 9 ರೊಳಗೆ ಜಿಲ್ಲಾ ಉಪನಿರ್ದೇಶಕರ ಕಚೇರಿಗೆ ಆಕ್ಷೇಪಣೆ ಸಲ್ಲಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮುಂಗಾರು ಪ್ರವೇಶ : ಕೇರಳದಲ್ಲಿ ಭಾರಿ ಮಳೆ



**ತಿರುವನಂತಪುರಂ:** ಕೇರಳಕ್ಕೆ ಮುಂಗಾರು ಪ್ರವೇಶಿಸುತ್ತಿದ್ದಂತೆ ರಾಜ್ಯದ ವಿವಿಧ ಭಾಗಗಳಲ್ಲಿ ರಾತ್ರಿಯಿಂದ ಭಾರೀ ಮಳೆಯಾಗುತ್ತಿದೆ. ಇಂದು ಬೆಳಿಗ್ಗೆ ರಾಜ್ಯದ ಮೂರು ಜಿಲ್ಲೆಗಳಲ್ಲಿ ಐಎಂಡಿ ಕಿತ್ತಳೆ ಎಚ್ಚರಿಕೆ ನೀಡಿದೆ.ಭಾರತ ಹವಾಮಾನ ಇಲಾಖೆ (ಐಎಂಡಿ) ಆಲಪ್ಪುಳ, ಕೊಟ್ಟಾಯಂ ಮತ್ತು ಎರ್ನಾಕುಲಂ ಜಿಲ್ಲೆಗಳಲ್ಲಿ ಮೂರು ಗಂಟೆಗಳ ಕಾಲ ಕಿತ್ತಳೆ ಎಚ್ಚರಿಕೆ ನೀಡಿದೆ.

ರಾಜ್ಯದ ಕೆಲವು ಭಾಗಗಳಲ್ಲಿ ಭಾರೀ ಮಳೆ ಮತ್ತು ಗಂಟೆಗೆ 40 ಕಿಲೋಮೀಟರ್ ವೇಗದಲ್ಲಿ ಗರಿಷ್ಠ ಮೇಲ್ಮೈ ಗಾಳಿಯ ವೇಗದೊಂದಿಗೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಸಂಸ್ಥೆ ತಿಳಿಸಿದೆ. ಇದಲ್ಲದೆ, ತಿರುವನಂತಪುರಂ, ಕೊಲ್ಲಂ, ಪತ್ತನಂತಿಟ್ಟ, ಇಡುಕ್ಕಿ ಮತ್ತು ತ್ರಿಶೂರ್ ಜಿಲ್ಲೆಗಳಲ್ಲಿ ಮಧ್ಯಮ ಮಳೆಯೊಂದಿಗೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಮತ್ತು ಗರಿಷ್ಠ ಮೇಲ್ಮೈ ಗಾಳಿಯ ವೇಗ ಗಂಟೆಗೆ 40 ಕಿಲೋಮೀಟರ್ ತಲುಪುವ ಸಾಧ್ಯತೆಯಿದೆ ಎಂದು ಐಎಂಡಿ ಮುನ್ಸೂಚನೆ ನೀಡಿದೆ. ಮಾನ್ಸೂನ್ ರಾಜ್ಯವನ್ನು ಅಪ್ಪಳಿಸುವ ನಿರೀಕ್ಷೆಯಿರುವ ಗುರುವಾರ ರಾಜ್ಯದ ಎಂಟು ಜಿಲ್ಲೆಗಳಲ್ಲಿ ಕಿತ್ತಳೆ ಎಚ್ಚರಿಕೆಯನ್ನು ನೀಡಿತ್ತು.ಆರೆಂಜ್ ಎಚ್ಚರಿಕೆ ಎಂದರೆ 11 ಸೆಂ.ಮೀ ನಿಂದ 20 ಸೆಂ.ಮೀ ವರೆಗೆ ಭಾರೀ ಮಳೆಯಾಗುವ ಸಾಧ್ಯತೆ ಇದೆ.

ಜನಶ್ರೀ ಟೈಮ್ಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

# 15 ದಿನದಲ್ಲಿ 2ನೇ ಹಂತದ ಸಂಪುಟ ವಿಸ್ತರಣೆ ಸಾಧ್ಯತೆ

**ಬೆಂಗಳೂರು:** ಮುಂದಿನ 15 ದಿನಗಳ ಒಳಗಾಗಿ ಎರಡನೇ ಹಂತದಲ್ಲಿ ಸಚಿವ ಸಂಪುಟ ವಿಸ್ತರಣೆಯಾಗುವ ಸಾಧ್ಯತೆ ಇದೆ. ಮೊದಲ ಹಂತದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಉಪ ಮುಖ್ಯಮಂತ್ರಿ ಡಾ.ಜಿ.ಪರಮೇಶ್ವರ್ ಸೇರಿ 14 ಮಂದಿ ಸಂಪುಟ ಸೇರಿದ್ದಾರೆ. ಇನ್ನೂ 20 ಸ್ಥಾನಗಳು ಖಾಲಿ ಇವೆ. ಅವುಗಳಿಗೆ 15 ರಿಂದ 20 ದಿನಗಳ ಒಳಗಾಗಿ ಸಚಿವರನ್ನು ನಿಯೋಜಿಸಲಾಗುತ್ತದೆ ಎಂದು ಹೇಳಲಾಗಿದೆ.

ಕಳೆದ ವಾರದಲ್ಲಿ ಕ್ಷಿಪ್ರ ರಾಜಕೀಯ ಬೆಳವಣಿಗೆಗಳಾಗಿವೆ. ಸುಧೀರ್ಘ ಅವಧಿಗೆ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು, ಹೈಕಮಾಂಡ್‌ನ ಸೂಚನೆ ಮೇರೆಗೆ ದಿಢೀರ್ ರಾಜೀನಾಮೆ ನೀಡಿದ್ದರು. ಶಾಸಕಾಂಗ ಪಕ್ಷದ ನಾಯಕನನ್ನಾಗಿ ಡಿ.ಕೆ.ಶಿವಕುಮಾರ್ ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಗಿತ್ತು. ಆ ನಂತರ 14 ಮಂದಿ ನಿನ್ನೆ ಪ್ರಮಾಣವಚನ ಸ್ವೀಕರಿಸಿದರು. ಇದೇ ಸಂದರ್ಭದಲ್ಲಿ ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಹಿರಿಯ ನಾಯಕ ಬಿ.ಕೆ.ಹರಿಪ್ರಸಾದ್ ಅವರನ್ನು ಹೈಕಮಾಂಡ್ ರಾಜ್ಯ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ನೇಮಿಸಿದೆ.

ವಿಧಾನ ಸಭೆಯ ಅಧ್ಯಕ್ಷರಾಗಿದ್ದ ಯು.ಟಿ.ಖಾದರ್ ಅವರು ತಮ ಸ್ಥಾನಕ್ಕೆ ರಾಜೀನಾಮೆ ನೀಡಿ, ನಿನ್ನೆ ಸಚಿವ ಸಂಪುಟಕ್ಕೆ ಸೇರಿದ್ದಾರೆ. ವಿಧಾನ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಹೊಸಬರನ್ನು ಆಯ್ಕೆ ಮಾಡಬೇಕಿದೆ.

ವಿಧಾನಸಭೆಯಿಂದ ವಿಧಾನ ಪರಿಷತ್‌ನ ನಾಲ್ಕು ಸದಸ್ಯರ ಆಯ್ಕೆಗಾಗಿ ಜೂನ್ 18ರಂದು ನಡೆಯುವ ಚುನಾವಣೆಗಾಗಿ ನಾಲ್ವರ ಅಭ್ಯರ್ಥಿಗಳ ಹೆಸರನ್ನು ಹೈಕಮಾಂಡ್ ನಿನ್ನೆಯೇ ಘೋಷಿಸಿದೆ. ಈ ಎಲ್ಲಾ ದಿಢೀರ್ ಬೆಳವಣಿಗೆಗಳಂತೆ ಸಂಪುಟದ ಖಾಲಿ ಇರುವ ಹುದ್ದೆಗಳಿಗೂ ಶೀಘ್ರದಲ್ಲೇ ನೇಮಕಾತಿಯಾಗಲಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.ಇನ್ನೆರಡು ತಿಂಗಳ ಒಳಗಾಗಿ ಮಳೆಗಾಲದ ವಿಧಾನಮಂಡಲದ ಅಧಿವೇಶನ



ನಡೆಸಬೇಕಿದೆ. ಆ ವೇಳೆಗೆ ಪೂರ್ಣ ಪ್ರಮಾಣದ ಸಂಪುಟ ರಚಿಸುವುದು ಮುಖ್ಯಮಂತ್ರಿಯವರ ಇರಾದೆಯಾಗಿದೆ. ವಿಧಾನಸಭೆ ಮತ್ತು ರಾಜ್ಯಸಭೆಗೆ ಸದಸ್ಯರ ಆಯ್ಕೆಗೆ ಚುನಾವಣೆಯ ಬಳಿಕ ಡಿ.ಕೆ.ಶಿವಕುಮಾರ್, ಸಿದ್ದರಾಮಯ್ಯ, ಪರಮೇಶ್ವರ್ ಹಾಗೂ ಬಿ.ಕೆ.ಹರಿಪ್ರಸಾದ್ ಮತ್ತೊಮೆ ದೆಹಲಿಗೆ ಭೇಟಿ ನೀಡಲಿದ್ದು, ಸಂಪುಟ ವಿಸ್ತರಣೆ?, ನಿಗಮ ಮಂಡಳಿಗಳ ಕುರಿತಂತೆ ಹೈಕಮಾಂಡ್ ನಾಯಕರ ಜೊತೆ ಚರ್ಚೆ ನಡೆಸಲಿದ್ದಾರೆ.

ಎರಡನೇ ಹಂತದ ಸಂಪುಟ ರಚನೆಯ ವೇಳೆ ಯುವ ಉತ್ಸಾಹಿಗಳಿಗೆ ಮಣೆ ಹಾಕಲಾಗುತ್ತದೆ. ಡಿ.ಕೆ.ಶಿವಕುಮಾರ್ ಅವರು ತಮದೇ ಆದ ಸಂಪುಟದ ತಂಡವನ್ನು ಕಟ್ಟಿಕೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

# ರಾಜ್ಯದಲ್ಲಿ ಮದ್ಯ ಮಾರಾಟದಲ್ಲಿ ಭಾರಿ ಕುಸಿತ, ಅಬಕಾರಿ ಇಲಾಖೆಗೆ ಆಘಾತ

**ಬೆಂಗಳೂರು:** ಕರ್ನಾಟಕ ಸರ್ಕಾರಕ್ಕೆ ಅತಿ ಹೆಚ್ಚು ಆದಾಯ ತಂದುಕೊಡುವ ಅಬಕಾರಿ ಇಲಾಖೆಗೆ ದೊಡ್ಡ ಆಘಾತ ಎದುರಾಗಿದೆ. ಕಳೆದ ಏಪ್ರಿಲ್ ತಿಂಗಳಿಗೆ ಹೋಲಿಸಿದರೆ ಮೇ ತಿಂಗಳಲ್ಲಿ ರಾಜ್ಯದಲ್ಲಿ ಮದ್ಯ ಮತ್ತು ಬಿಯರ್ ಮಾರಾಟದಲ್ಲಿ ಭಾರಿ ಇಳಿಕೆ ಕಂಡುಬಂದಿದೆ. ಇದರಿಂದಾಗಿ ಕೇವಲ ಒಂದು ತಿಂಗಳಲ್ಲಿ ಸರ್ಕಾರದ ಆದಾಯಕ್ಕೆ ಬರೋಬ್ಬರಿ 455 ಕೋಟಿ ರೂಪಾಯಿ ನಷ್ಟವಾಗಿದೆ.

ಅಬಕಾರಿ ಇಲಾಖೆಯ ಅಂಕಿ-ಅಂಶಗಳ ಪ್ರಕಾರ, ಏಪ್ರಿಲ್‌ನಲ್ಲಿ 3,687 ಕೋಟಿ ರೂಪಾಯಿ ಆದಾಯವಿದ್ದರೆ, ಮೇ ತಿಂಗಳಲ್ಲಿ ಅದು 3,232 ಕೋಟಿ ರೂಪಾಯಿಗೆ ಕುಸಿದಿದೆ. ಭಾರತೀಯ ತಯಾರಿಕೆಯ ವಿದೇಶಿ ಮದ್ಯ ಮಾರಾಟವು ಏಪ್ರಿಲ್‌ನ 68.17 ಲಕ್ಷ ಬಾಕ್ಸ್‌ಗಳಿಂದ ಮೇನಲ್ಲಿ 51.17 ಲಕ್ಷ ಬಾಕ್?ಸಗಳಿಗೆ ಇಳಿದಿದೆ. ಅಂದರೆ ಸುಮಾರು 17 ಲಕ್ಷ ಬಾಕ್ಸ್‌ಗಳಷ್ಟು ಭಾರಿ ಕುಸಿತ ದಾಖಲಾಗಿದೆ. ಬಿಯರ್




ಮಾರಾಟವೂ 50.39 ಲಕ್ಷ ಬಾಕ್ಸ್ ಗಳಿಂದ 48.97 ಲಕ್ಷ ಬಾಕ್?ಸಗಳಿಗೆ ಇಳಿಕೆಯಾಗಿದೆ.

ಬೇಸಿಗೆಯ ಬಿಸಿಲು ಹೆಚ್ಚಾಗುವ ಸಮಯದಲ್ಲಿ ಮದ್ಯ ಮಾರಾಟ ಸಾಮಾನ್ಯವಾಗಿ ಹೆಚ್ಚಾಗುತ್ತದೆ. ಆದರೆ ಈ ಬಾರಿ ಅನಿರೀಕ್ಷಿತವಾಗಿ ಬೇಡಿಕೆ ಕುಸಿದಿರುವುದು ಸರ್ಕಾರಕ್ಕೆ ಆತಂಕ ತಂದಿದೆ. ಅಬಕಾರಿ ಇಲಾಖೆಯು ಈ ಇಳಿಕೆಗೆ ನಿಖರ ಕಾರಣಗಳನ್ನು ಪತ್ತೆಹಚ್ಚಲು ಪರಿಶೀಲನೆ ಆರಂಭಿಸಿದೆ. ಬೆಲೆ ಏರಿಕೆ, ಜನರ ಖರ್ಚು ಕಡಿತ ಅಥವಾ ಬೇರೆ ಯಾವುದೇ ಕಾರಣಗಳಿರಬಹುದು ಎಂಬುದನ್ನು ತನಿಖೆ ಮಾಡಲಾಗುತ್ತಿದೆ.

ಈ ಕುಸಿತವು ಸರ್ಕಾರದ ಬೊಕ್ಕಸಕ್ಕೆ ದೊಡ್ಡ ಹೊಡೆತವಾಗಿದೆ. ಅಬಕಾರಿ ಆದಾಯವು ರಾಜ್ಯದ ಒಟ್ಟು ಆದಾಯದಲ್ಲಿ ಮುಖ್ಯ ಪಾಲು ಹೊಂದಿದೆ. ಈ ನಷ್ಟವು ರಾಜ್ಯದ ಆರ್ಥಿಕ ಯೋಜನೆಗಳ ಮೇಲೆ ಪರಿಣಾಮ ಬೀರಬಹುದು ಎಂದು ಆರ್ಥಿಕ ತಜ್ಞರು ಎಚ್ಚರಿಸಿದ್ದಾರೆ.

ಸರ್ಕಾರವು ಮದ್ಯ ಮಾರಾಟ ಹೆಚ್ಚಿಸಲು ಹೊಸ ತಂತ್ರಗಳನ್ನು ರೂಪಿಸುತ್ತಿದೆಯಾ ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಆದರೆ ಈ ಇಳಿಕೆಯು ಮದ್ಯಪಾನದ ವಿರುದ್ಧದ ಜಾಗೃತಿ ಅಭಿಯಾನಗಳು ಅಥವಾ ಆರ್ಥಿಕ ಕಾರಣಗಳಿಂದಾಗಿರಬಹುದು ಎಂಬ ಚರ್ಚೆಗಳು ಆರಂಭವಾಗಿವೆ. ಈ ಬೆಳವಣಿಗೆಯು ರಾಜ್ಯದ ಆರ್ಥಿಕತೆಗೆ ಸವಾಲು ಒಡ್ಡುವಂತಿದೆ. ಅಬಕಾರಿ ಇಲಾಖೆಯು ಮುಂದಿನ ತಿಂಗಳುಗಳಲ್ಲಿ ಮಾರಾಟ ಹೆಚ್ಚಿಸುವ ನಿರೀಕ್ಷೆಯಲ್ಲಿದೆ.

# ಕುಟುಂಬ



ಹೆತ್ತ ತಂದೆತಾಯಿ ಇರುವವರೆಗೆ ಮಾತ್ರ ಊರು ಒಡಹುಟ್ಟಿದವರು ಬಂಧು ಮಿತ್ರರು ಎಂಬ ಕೊಂಡಿ ಬೆಸೆದುಕೊಂಡಿರುತ್ತದೆ,

ಅವರೇ ಕಾಲವಾದ ನಂತರ ಎಲ್ಲರೂ ಒಂದಲ್ಲ ಒಂದು ಕಾರಣದಿಂದ ದೂರಾಗುತ್ತಲೇ ಹೋಗುತ್ತಾರೆ. ಇದು ಎಲ್ಲಾ ರೀತಿಯ ಕುಟುಂಬಗಳಿಗೂ ಅನ್ವಯಿಸುವುದಂತೂ ನಿಜ. ನಾವು ಎಷ್ಟೇ ಕಷ್ಟಪಟ್ಟು ಹಿಡಿದಿಟ್ಟುಕೊಂಡ ಬಾಂಧವ್ಯದ ಕೊಂಡಿಗಳು ಕಾಲಕ್ರಮೇಣ ಸಡಿಲವಾಗಿ ಎಲ್ಲೋ ಒಂದು ಕಡೆ ಜಾರುವ ಸಂದರ್ಭಗಳು ಬರಬಹುದು.

ಕೆಲವರು ತುಂಬಾ ಸೂಕ್ಷ್ಮ ಮನಸ್ಥಿತಿಯನ್ನು ಹೊಂದಿರುತ್ತಾರೆ, ಅಂತಹವರಿಗೆ ಇಂತಹ ಪರಿಸ್ಥಿತಿಯನ್ನು ತಕ್ಷಣವೇ ಸುಧಾರಿಸಿಕೊಳ್ಳಲು ಕಷ್ಟವಾಗಬಹುದು. ಆದರೂ ಇದಂತೂ ಕಟುಸತ್ಯ, ಕಾಲಕ್ರಮೇಣ ಕುಟುಂಬ ಬೆಳೆದಂತೆ ಪ್ರತಿಯೊಬ್ಬರೂ ಅವರವರ ಸಂಸಾರಕ್ಕೆ ಪ್ರಾಮುಖ್ಯತೆ ಕೊಟ್ಟು ಕಾರಣಾಂತರಗಳಿಂದ ಅಸಹಾಯಕರಾಗಿ ಹಿಂದಿನಷ್ಟು ಕುಟುಂಬದೊಂದಿಗೆ ಬೆರೆಯಲು ಸಾಧ್ಯವಾಗುವುದಿಲ್ಲ.

ಅದರಲ್ಲೂ ಹಾಗೋ ಹೀಗೋ ತಂದೆತಾಯಿ ಬದುಕಿರುವವರೆಗೆ ಅವರ ಮನಸ್ಸಂತೋಷಕ್ಕಾಗಿಯಾದರೂ ಅಗಾಗ್ಗೆ ಉಳಿದ ಅಣ್ಣತಮ್ಮಂದಿರೊಂದಿಗೆ ಹಾಗೂ ಅಕ್ಕತಂಗಿಯರೊಂದಿಗೆ ಸಂಪರ್ಕ ಇಟ್ಟುಕೊಂಡಿರುತ್ತಾರೆ. ಒಮ್ಮೆ ಹಳೆಯ ಕೊಂಡಿ ಎನಿಸಿಕೊಂಡ ಹೆತ್ತವರು ತೀರಿಕೊಂಡ ಬಳಿಕ ಅನೇಕ ಕುಟುಂಬಗಳಲ್ಲಿ ಎಲ್ಲರೂ ಪರಕೀಯರಂತೆ ಆಗಿಬಿಡುವುದು ವಿಪರ್ಯಾಸ. ಇತ್ತೀಚಿನ ದಿನಗಳಲ್ಲಿ ಇಂತಹ ಹಲವಾರು ನಿದರ್ಶನಗಳು ನೋಡಲು ಸಿಗುತ್ತದೆ. ಇಂತಹ ಒಂದು ಬೆಳವಣಿಗೆಗೆ ಮುಖ್ಯ ಕಾರಣ ನಮ್ಮ ಒಳಗಿರುವ ಸ್ವಾರ್ಥ ಹಾಗೂ ಅಹಂ ಕಾರಣವಷ್ಟೇ ಅಲ್ಲದೆ ಬೇರೇನೂ ಅಲ್ಲ.

ಒಂದೇ ಕುಟುಂಬದವರಾದರೂ ಕೂಡ ಪ್ರತ್ಯೇಕ ಸಂಸಾರಹೂಡಿದ ಮೇಲೆ ತಮ್ಮ ಪ್ರತಿಷ್ಠೆ ಮೆರೆಯಲು ಇತರರನ್ನು ತುಚ್ಚವಾಗಿ ಕಾಣುವುದು ಹಾಗೂ ಎಲ್ಲಾ ವಿಷಯದಲ್ಲೂ ತಮಗೇ ಪ್ರಾಮುಖ್ಯತೆ ಸಿಗಬೇಕೆಂದು ಬಯಸುವುದು ಸರ್ವೇಸಾಮಾನ್ಯವಾಗಿಬಿಟ್ಟಿದೆ. ಇಂತಹ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸಿದಾಗ ನಾವು ನಮ್ಮವರೊಂದಿಗೇ ಅಪ-ರಿಚಿತರಾಗುತ್ತಿರುವ ಸಂಶಯ ಮನಸ್ಸಿನಲ್ಲಿ ಮೂಡುವುದು ನಿಜವಲ್ಲವೇ ಹೆತ್ತವರು ಬದುಕಿರುವವರೆಗೂ ಕುಟುಂಬದಲ್ಲಿ ಒಂದು ಭದ್ರತೆ ಇರುತ್ತದೆ, ಯಾವುದೇ ವಿಚಾರವಾದರೂ ಸಮಯೋಚಿತವಾಗಿ ಯೋಚಿಸಿ ಬುದ್ದಿಹೇಳುವ ಜವಾಬ್ದಾರಿ ಹೊಂದಿರುತ್ತಾರೆ.

ಪ್ರತಿಯೊಬ್ಬ ಮಕ್ಕಳನ್ನು ಆಗಾಗ ನೋಡಬೇಕೆಂಬ ಹಂಬಲದಿಂದ ಎಷ್ಟೇ ದೂರವಿದ್ದರೂ ತಮ್ಮಲ್ಲಿಗೆ ಕರೆಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ. ಹಬ್ಬಹರಿದಿನಗಳೆಂದರೆ ಎಲ್ಲರೂ ಜೊತೆಯಾಗಿಯೇ ಆಚರಿಸಿಕೊಳ್ಳಬೇಕೆನ್ನುವ ಅಪೇಕ್ಷೆಯಂತೆ ಸಾಧ್ಯವಾದಷ್ಟು ಕುಟುಂಬದ ಐಕ್ಯತೆಯನ್ನು ಹಿಡಿದಿಟ್ಟುಕೊಂಡಿರುತ್ತಾರೆ.

ಇದನ್ನು ಎಲ್ಲರೂ ತಮ್ಮ ಕಾಲಾನಂತರವೂ ನಡೆಸಿಕೊಂಡು ಹೋಗಬೇಕೆನ್ನುವ ಅಪೇಕ್ಷೆಯನ್ನು ಹೊಂದಿರುತ್ತಾರೆ. ಅದರೆ ಇಂದಿನ ಜೀವನ ಶೈಲಿ ಈ ತಲೆಮಾರಿನ ತೋರಿಕೆಯ ಪ್ರೀತಿ ವಿಶ್ವಾಸ ಇಂತಹ ಒಂದು ಬಾಂಧವ್ಯದ ಕೊಂಡಿಬೆಸೆಯುವಲ್ಲಿ ವಿಫಲವಾಗಿದೆ ಎನ್ನಬಹುದು. ಬಹಳಷ್ಟು ಕುಟುಂಬಗಳು ಹಂಚಿಹರಡಿ ಪ್ರತ್ಯೇಕ ಸಂಸಾರಗಳಾಗಿ ಅಷ್ಟಕ್ಕೇ ಸೀಮಿತಗೊಂಡಿವೆ ಅವರ ಆಚರಣೆ ಹಾಗೂ ಬಾಂಧವ್ಯ...ತವರಿನ ಸಂಪರ್ಕಕಳೆದುಕೊಂಡು ಮನಸ್ಸಿನಲ್ಲೇ ದುಃಖಿಸುತ್ತಿರುವ ಎಷ್ಟೋ ಜನರನ್ನು ನಾವು ನೋಡುತ್ತಿದ್ದೇವೆ... ಇತ್ತೀಚೆಗಂತೂ ಎಲ್ಲಾ ಹಳ್ಳಿಗಳಲ್ಲೂ ಊರುಗಳಲ್ಲೂ ಒಂದೇ ಕಥೆ. ಭಣಗುಟ್ಟುತ್ತಿರುವ ಮನೆ, ಮಂದಿರಗಳು. ಹೆಚ್ಚಿನ ಕುಟುಂಬಗಳಲ್ಲಿ ಗಂಡೋ-ಹೆಣ್ಣೋ ಎಂಬಂತೆ ಒಂದೋ ಎರಡು ಮಗು. ಎಲ್ಲರಿಗೂ ಬೆಂಗಳೂ-ರಿನಲ್ಲಿ ಕೆಲಸ. ಹೆಂಡತಿ, ಮಗುವಿನೊಂದಿಗೆ ಅಲ್ಲೇ ಸಂಸಾರ.

ಆಸ್ತಿ, ಮೂಲ ಮನೆ ನೋಡಿಕೊಂಡು 60-70 ದಾಟಿರುವ ವೃದ್ಧ ಅಪ್ಪ-ಅಮ್ಮಂದಿರು ಮಾತ್ರ ಹಳ್ಳಿಯಲ್ಲಿದ್ದಾರೆ.
ಅವರಿಗೆ ಕೂಡುವುದಿಲ್ಲ. ಕೆಲಸ ಮಾಡಲು ಶಕ್ತಿಯಿಲ್ಲ. ಕೃಷಿ-ಬೇಸಾಯ, ತೋಟ, ಗದ್ದೆ ಎಲ್ಲಾ ಹಾಳು. ತರಕಾರಿಗಳು ಬೆಳೆಯುತ್ತಿಲ್ಲ. ಹಪ್ಪಳ-ಉಪ್ಪಿನಕಾಯಿ, ಗುಜ್ಜೆಗಟ್ಟಿ, ಮೂಡೆ ಮಾಡುವವರಿಲ್ಲ. ಎಲ್ಲರೂ ಪೇಟೆಯಲ್ಲಿರುವ ಕಾರಣ, ಹಳ್ಳಿಯ ಶಾಲೆಗಳಲ್ಲಿ ಮಕ್ಕಳಿಲ್ಲ. ದೈವ ಕೋಲ, ಮದುವೆ-ಉಪನಯನಕ್ಕೆ ಪುರ್ರೆಂದು ಎಲ್ಲರೂ ತಮ್ಮ ತಮ್ಮ ವಾಹನಗಳಲ್ಲಿ ಹಾರಿ ಬರುತ್ತಾರೆ. ಊಟ ಮಾಡಿ ಕೈ ತೊಳೆದು ತಿರುಗಿ ನೋಡಿದಾಗ ಮತ್ತೆ ಬೆಂಗಳೂರಿಗೆ ಹೊರಡಲು ಕಾರು ಸ್ಟಾರ್ಟ್ ಆಗಿದೆ. ಹೆತ್ತ ಕರುಳಿಗೆ ಮಕ್ಕಳು, ಮೊಮ್ಮಕ್ಕಳೊಡನೆ ಸಮಯ ಕಳೆಯುವ, ಮುದ್ದಿಸುವ, ಆಲಿಂಗಿಸುವ ಅವಕಾಶವಿಲ್ಲ, ಉದ್ಯೋಗದಲ್ಲಿರುವ ಮಕ್ಕಳಿಗೆ ಸ್ವಲ್ಪವೂ ಸಮಯವಿಲ್ಲ. ಹಳ್ಳಿಯ ಶಾಲೆಗಳಲ್ಲಿ ಸ್ಕೂಲ್ ಡೇ ಗೆ ಜನರಿಲ್ಲ. ದೇವರ ಉತ್ಸವಕ್ಕಾಗಲಿ, ರಾಮನವಮಿಗಾಗಲಿ, ದೇವಸ್ಥಾನಗಳ ಪೂಜೆಗಾಗಲೀ, ಸ್ವಾತಂತ್ರ್ಯ ದಿನಾಚರಣೆಯಾಗಲಿ, ಮೆರವಣಿಗೆ ಹೋಗಲು, ಆನಂದಿಸಲು ಹಳ್ಳಿಗಳಲ್ಲಿ ಜನರೂ ಇಲ್ಲ, ಮಕ್ಕಳೂ ಇಲ್ಲ. ವೃದ್ಧ ಅಜ್ಜಂದಿರಿಗೆ ತಮ್ಮ ಕೆಲಸ ಕಾರ್ಯ ಮಾಡಲು, ನಡೆಯಲು ಆಗುವುದಿಲ್ಲ.
ಒಳ್ಳೆಯ ಡಾಕ್ಟರನ್ನು ನೋಡಿ, ಒಳ್ಳೆಯ ಚಿಕಿತ್ಸೆ ಪಡೆಯಿರಿ.. ಎಂದು ಸಾವಿರಗಟ್ಟಲೆ ಹಣ ಕಳಿಸುತ್ತಾರೆ ಬೆಂಗಳೂರಿನಲ್ಲಿ ಸಂಸಾರ ಹೂಡಿರುವ ಮಕ್ಕಳು, ಮೊಮ್ಮಕ್ಕಳು.

ಸಂಬಂಧಗಳನ್ನು, ಪ್ರೀತಿ-ವಾತ್ಸಲ್ಯಗಳನ್ನು ಮೀರಿದ ಔಷಧಿಯಿಲ್ಲ ಎಂದು ಇವರಿಗೆ ಅರ್ಥ ಮಾಡಿಸಿ, ತಿಳಿಸಿ ಹೇಳುವವರು ಯಾರು ಮತ್ತು ಹೇಗೆ..?? ಇನ್ನೊಂದೆಡೆ ವಯಸ್ಸು ಮೀರಿ ಮುದುಕರಾಗುತ್ತಿದ್ದರೂ.. ಹುಡುಗಿ ಸಿಗದೆ ಬಾಕಿ ಉಳಿದಿರುವ ಅಣ್ಣ-ತಮ್ಮಂದಿರ ಮಾನಸಿಕ ವ್ಯಥೆ, ಅವರಿಗಾಗಿ ಕೊರಗುತ್ತಿರುವ ತಂದೆ-ತಾಯಿಯರು. ಮನೆಗೊಂದೇ ಮಗು ಸಾಕು ಎಂಬ ಸ್ವಾರ್ಥದಿಂದಾಗಿ ಚಿಕ್ಕಪ್ಪ, ಚಿಕ್ಕಮ್ಮ, ಅತ್ತೆ, ಮಾವ, ಕಸಿನ್ಸ್, ಅತ್ತಿಗೆ, ಮೈದುನ ಎಂಬ ಸಂಬಂಧಗಳು ಇಲ್ಲವಾಗುತ್ತಿವೆ. ಇದಕ್ಕಿಂತ ಮುಂದಿನ ವಿಷಯ ಆ ಮಗು ಯಾವುದೇ ತಿಂಡಿ ತಿನಿಸು ಆಟಿಗೆ ಹಂಚಿಕೊಳ್ಳುವವರೂ ಇಲ್ಲ. ಒಂಟಿ ಗೂಬೇ ಹಾಗೆ ಕೂಡುವುದು, ಆ ಮಗುವಿನ ಸಂಗಾತಿ ಎಂದರೆ ಮೊಬೈಲ್, ಕಂಪ್ಯೂಟರ್ ಅಥವಾ ಟೀವಿಯಲ್ಲಿ ಯ ಕಾರ್ಟೂನ್ ಫಿಲ್ಲಂ.. ಏನಾಗಬೇಕು ಭವಿಷ್ಯ ಯೋಚಿಸಿ.. ಪಟ್ಟಣದಲ್ಲಿ ಜೀವನೋಪಾಯಕ್ಕಾಗಿ ...... ಹಣ ಗಳಿಸುವ ರೇಸ್ ನಲ್ಲಿ ಬೆಂಗಳೂರಿನಲ್ಲಿ ಹೆಣಗಾಡುತ್ತಿರುವ ಪೀಳಿಗೆಯವರೂ ಸುಖದಲ್ಲಿಲ್ಲ. ಅತ್ತ ಹಳ್ಳಿಗಳಲ್ಲಿ ಅವರ ತಂದೆ ತಾಯಿಗಳೂ ಸುಖದಲ್ಲಿಲ್ಲ.
ಇದಕ್ಕೆ ಪರಿಹಾರವೇನು?ದಯವಿಟ್ಟು ಯೋಚಿಸಿ.
ಈಗಂತೂ ಅಪಾರ್ಟ್ಮೆಂಟ್ ನಲ್ಲಿ ಯ ಎಲ್ಲರ ಮನೆಗಳು ಯಾವಾಗಲೂ ಕ್ಲೋಸ್.. ಬೆಳಿಗ್ಗೆ ಬಾಗಿಲಿಗೆ ರಂಗೋಲಿ ಇರಲ್ಲ, ಬಾಗಿಲು ಕ್ಲೋಸ್ ಇರತ್ತೆ.. ಪರ್ಮನೆಂಟ್ ಸ್ಟಿಕ್ಕರ್ ಹಾಕಿರ್ತಾರೆ. ಸಾಯಂಕಾಲ ಲಕ್ಷ್ಮೀ ಬರುವ ಹೊತ್ತಿಗೂ ಕ್ಲೋಸೆ.. ಇದೇ ರೀತಿ ನಡೆದರೆ ಒಟ್ಟಿನಲ್ಲಿ ಭವಿಷ್ಯ ಭಯಾನಕ........

ಸಾಧ್ಯವಾದಷ್ಟು ಮಟ್ಟಿಗೆ ಊರಿನಲ್ಲಿ ಉದ್ಯೋಗ ಸೃಷ್ಟಿ, ಹೆತ್ತವರೊಂದಿಗೆ...., ಪ್ರಕೃತಿಯೊಂದಿಗೆ....... ಸಂಬಂಧಗಳ ಬೆಸುಗೆಯೊಂದಿಗೆ ಜೀವನ ನಡೆಸಲು ಸಾಧ್ಯವಾಗಿಸುವಂತಾಗಬೇಕು.... ಜೀವನದ ಸಾರ್ಥಕ ಸಮಯದೊಂದಿಗೆ ನಾವು ಇರುವಂತಾಗಬೇಕು..... ಮನೆ, ಕುಟುಂಬ, ಸ್ಥೇಹಿತರು ಹಾಗೂ ನಮ್ಮ ಸಂಸ್ಕೃತಿ
ನಮ್ಮನ್ನು ಯಶಸ್ಸಿನ ಮೇಲಿನ ಹಂತದಲ್ಲೆ ಇರಲು ಸಹಕರಿಸುತ್ತವೆ,

ಎಲ್ಲಾ ಸದಸ್ಯರನ್ನೂ ಸಮಾನವಾಗಿ ಕಾಣುವ ಮನಸ್ಸು ಇರಬೇಕು ..ಪ್ರೀತಿ ವಿಶ್ವಾಸದಿಂದ ಎಲ್ಲರೊಂದಿಗೂ ಬೆರೆತು ಬಾಳಿನ ಸಂತೋಷವನ್ನು ಸವಿಯುವ ಮನಸ್ಸು ಮಾಡಿದರೆ ಜೀವನ ಸುಂದರವಾಗಿರುವುದು. ಕುಟುಂಬ ಸದಸ್ಯರಿಗೆ ಪ್ರೀತಿಯಿಂದ ಕಾಣಿ ,ಗೌರವದಿಂದ ನೋಡಿ ಎಲ್ಲವೂ ಹಣದಿಂದ ತೂಗಬೇಡಿ ,ಹಳೆಯ ಮನಸ್ತಾಪದ ಬಗ್ಗೆ ಮೆಲಕು ಹಾಕಬೇಡಿ ,ನಾನು ಸರಿ ಅವರು ಕೆಟ್ಟವರು ಅನ್ನುವುದನ್ನು ಬಿಡಿ,ಉಳಿದ ಜೀವನವನ್ನು ಸಂತೋಷವಾಗಿರಿ, ಎಲ್ಲರನ್ನೂ ಖುಷಿ ಪಡಿಸುವ ಹಾಗೆ



ಪ್ರಶಾಂತಭಟ್ ಕೋಟೇಶ್ವರ

# ನನ್ನ ಆಯ್ಕೆಯ ಬದುಕು ನನ್ನ ಹಕ್ಕು.. ನವಲ್ ಎಲ್ ಸಾದಾವಿ



ಹಸಿಯಾದ ನೇರಳೆ ಬಣ್ಣದ ಬದನೆಕಾಯಿಯನ್ನು ಕಚ್ಚಿ ತಿಂದು ತನ್ನ ಹಲ್ಲುಗಳನ್ನು ಕಪ್ಪಾಗಿಸಿಕೊಂಡ ಆಕೆಯನ್ನು ನೋಡಿ ಅವರು ಮತ್ತೊಂದು ಮಾತನಾಡದೆ ಅಲ್ಲಿಂದ ಹಿಂತಿರುಗಿದರು. ಹತ್ತನೇ ವಯಸ್ಸಿನಲ್ಲಿ ತನ್ನನ್ನು ಮದುವೆಯಾಗಬಯಸಿದ ವರನ ಕುಟುಂಬದವರನ್ನು ಆಕೆ ಎದುರಿಸಿದ್ದು ಹೀಗೆ.. ತನ್ನ ಜೀವನದ ಕಾಲದಲ್ಲಿ ಹೋರಾಟವನ್ನೇ ಉಸಿರಾಗಿಸಿಕೊಂಡ ಈಜಿಪ್ಟ್ ದೇಶದ ಪ್ರಸಿದ್ಧ ಸ್ತ್ರೀ ವಾದಿ ಲೇಖಕಿ, ಭಾಷಣಕಾರ್ತಿ, ಮಹಿಳಾಪರ ಸಂಘಟನೆ ಮಾಡಿದ ವ್ಯಕ್ತಿ ವೈದ್ಯೆ ನವಲ್ ಎಲ್ ಸಾದಾವಿ. ಮೂಲಭೂತವಾದಿಗಳು ಈಕೆಯನ್ನು ಜೈಲು ಪಾಲಾಗಿಸಿ ಈಕೆಯ ಕೈಯಲ್ಲಿನ ಪೆನ್ನು ಮತ್ತು ಹಾಳೆಗಳನ್ನು ಕಸಿದುಕೊಂಡರೆ ಈಕೆ ಜೈಲಿನಲ್ಲಿಯೇ ಕುಳಿತು ತನ್ನ ಜೊತೆ ಜೈಲಿನಲ್ಲಿದ್ದ ಮತ್ತೋರ್ವ ಹೆಣ್ಣು ಮಗಳ ಐಬ್ರೋ ಪೆನ್ಸಿಲಿನಿಂದ ಬಳಸಿ ಬಿಸಾಡುವ ಟಿಶ್ಯೂ ಪೇಪರ್ ನ ಮೇಲೆ ಬರೆದು ಅರಬ್ ದೇಶದಲ್ಲಿ ಸ್ತ್ರೀ ವಾದಿಗಳ ಸಂಘಟನಾತ್ಮಕ ಹೋರಾಟಕ್ಕೆ ಕಾರಣವಾಗಿ ಸ್ತ್ರೀ ಶೋಷಣೆಯ ವಿರುದ್ಧ ಹೋರಾಡಿದಳು.

ಹೆಣ್ಣುಮಕ್ಕಳನ್ನು ಅತ್ಯಂತ ನಿಕೃಷ್ಟವಾಗಿ ಕಾಣುತ್ತಿದ್ದಪಿತೃ ಸತ್ತಾತ್ಮಕ ವ್ಯವಸ್ಥೆಯ ಅಡಿಯಲ್ಲಿ ನರಳುತ್ತಿದ್ದ ಈಜಿಪ್ಟ್ ದೇಶದ ಕಫ್ರ ತೆಹಲ ಎಂಬ ಊರಿನಲ್ಲಿ ತನ್ನ ಪಾಲಕರ 9 ಜನ ಮಕ್ಕಳಲ್ಲಿ ಎರಡನೆಯವಳಾಗಿ 1931 ರಲ್ಲಿ ಹುಟ್ಟಿದಾಕೆ ನವಲ್. ಹೆಣ್ಣು ಮಕ್ಕಳನ್ನು ಹೊರೆ ಎಂದು ಭಾವಿಸುವ ಅಂದಿನ ಸಾಮಾಜಿಕ ವ್ಯವಸ್ಥೆಯ ಮಧ್ಯದಲ್ಲಿ ಬೆಳೆದ ನವಲ್ ತನ್ನ ಅಜ್ಜಿಯ 'ಹದಿನೈದು ಹೆಣ್ಣು ಮಕ್ಕಳಿಗೆ ಒಂದು ಗಂಡು ಮಗು ಸಮಾನ, ಹೆಣ್ಣು ಮಕ್ಕಳು ರೋಗಿಷ್ಟರು ' ಎಂಬ ಹೀಯಾಳಿಕೆಗಳನ್ನು ಕೇಳುತ್ತಲೇ ಬೆಳೆದಳು.... ಆದರೆ ತನ್ನ ಜೀವಿತದುದ್ದಕ್ಕೂ ಅದನ್ನು ಒಪ್ಪಿಕೊಳ್ಳದೆ ಹೋರಾಟ ಮಾಡಿದಳು. ಆಕೆಯ 6ನೇ ವಯಸ್ಸಿನಲ್ಲಿ ಆಕೆಯ ಕುಟುಂಬದ ಹಿರಿಯ ಹೆಣ್ಣುಮಗಳು ನೆಲದ ಮೇಲೆ ಕೆಡವಿಕೊಂಡು ಆಕೆಯ ಯೋನಿಯನ್ನು ಛೇದಿಸಿದಳು. ಮಾರಣಾಂತಿಕವಾದ ನೋವನ್ನು ಅನುಭವಿಸಿದ ನವಲ್ ಗೆ ಅದನ್ನು ಮರೆಯಲು ಸಾಧ್ಯವಾಗಲೇ ಇಲ್ಲ. ಆಕೆಯ ಮನದ ಮೂಲೆಯಲ್ಲಿ ಇದನ್ನು ಕೊನೆಗಾಣಿಸುವ ವ್ಯೂಹವೊಂದು ತಯಾರಾಗುತ್ತಿತ್ತು. ಆ ನೆನಪನ್ನು ತನ್ನ ಬದುಕಿನದ್ದಕ್ಕೂ ಮರೆಯದ ಆಕೆ ತನ್ನ ಮುಂದಿನ ಬದುಕಿನ 8 ದಶಕಗಳ ಕಾಲ ಈ ಯೋನಿಚ್ಛೇದನ ಪ್ರಕ್ರಿಯೆಯನ್ನು ಕೊನೆಗಾಣಿಸಲು ಹೋರಾಡಿದಳು.

ಆಕೆಯ 10ನೇ ವಯಸ್ಸಿನ ಸುಮಾ-ರಿಗೆ ಕುಟುಂಬದವರು ಆಕೆಯ ಮದುವೆಯಾಗಲು ಗಂಡನ್ನು ನಿಶ್ಚಯಿಸಿದರು. ವರನ ಕುಟುಂಬದವರು ಆಕೆಯನ್ನು ಪರೀಕ್ಷಿಸಲು ಬರುವವರಿದ್ದರು... ಆದರೆ ನವಲ್ ಗೆ ತನ್ನದೇ ಆದ ಯೋಜನೆಯಿತ್ತು. ಆಕೆ ನೇರಳೆ ವರ್ಣದ ಹಸಿ ಬದನೆಕಾಯಿಯನ್ನು ಕಚ್ಚಿ ಕಚ್ಚಿ ತಿಂದು ಅದರ ರಸದಿಂದ ತನ್ನ ಹಲ್ಲುಗಳನ್ನು ಕಪ್ಪಾಗಿಸಿಕೊಂಡು ತನ್ನನ್ನು ಪರೀಕ್ಷಿಸಲು ಬಂದವರ ಮುಂದೆ ಇನ್ನಿಲ್ಲದಂತೆ ಬಾಯಿಯನ್ನು ಅಗಲವಾಗಿಸಿ ತನ್ನ ಹಲ್ಲುಗಳು ಕಾಣುವಂತೆ ನಕ್ಕಳು. ಬಂದವರು ಮರು ಮಾತನಾಡದೆ ಯಾವ ಪರೀಕ್ಷೆಯನ್ನು ಮಾಡದೆ ಅಲ್ಲಿಂದ ಕಾಲ್ತೆಗೆದರು.ಈ ರೀತಿ ಆಕೆಯ ಬಾಲ್ಯ ವಿವಾಹದ ತಯಾರಿ ಮುರಿದು ಬಿತ್ತು... ಇದು ಆಕೆಗೆ ತನ್ನ ಬದುಕನ್ನು ಚೆನ್ನಾಗಿ ರೂಪಿಸಿಕೊಳ್ಳಲು ಹೆಚ್ಚಿನ ಸಮಯಾವಕಾಶವನ್ನು ನೀಡಿತು ಆಗಿನ ಕಾಲಮಾನಕ್ಕೆ ತುಸು ಹೆಚ್ಚೇ ಅಭಿವೃದ್ಧಿಪರ ಯೋಚನೆಗಳನ್ನು ಹೊಂದಿದ್ದ ಆಕೆಯ ತಂದೆ ತನ್ನ ಎಲ್ಲಾ ಹೆಣ್ಣು ಮಕ್ಕಳು ಒಳ್ಳೆಯ ಶಿಕ್ಷಣವನ್ನು ಪಡೆಯಲು ಅರ್ಹರು ಎಂದು ನಂಬಿದ್ದ....ಅಂತೆಯೇ ನವಲ್ ಒಳ್ಳೆಯ ಶಿಕ್ಷಣ ಪಡೆದು ವೈದ್ಯರಾಗಬೇಕು ಎಂಬ ಆಶಯವನ್ನು ಹೊಂದಿದ್ದಳು. ಕೈಗೆ ಸಿಕ್ಕ ಪೇಪರಿನ ತುಣುಕನ್ನು ಕೂಡ ಬಿಡದೆ ಓದುತ್ತಿದ್ದ ನವಾಲ್ ತನ್ನ 13ನೆಯ ವಯಸ್ಸಿನಲ್ಲಿ ಕಾದಂಬರಿಯೊಂದನ್ನು ಬರೆದಳು. 955ರಲ್ಲಿ ತನ್ನ 24ನೇ ವಯಸ್ಸಿಗೆ ಆಕೆ ಕೈರೋ ವಿಶ್ವವಿದ್ಯಾಲಯದ ವೈದ್ಯಕೀಯ ಕಾಲೇಜಿನಿಂದ ಪದವಿ ಪಡೆದಳು.ತನ್ನ ದೇಶದ ಗ್ರಾಮೀಣ ಭಾಗದಲ್ಲಿ ಆಕೆ ತಜ್ಞ ವೈದ್ಯರಾಗಿ ಕಾರ್ಯನಿರ್ವಹಿಸಲು ಆರಂಭಿಸಿದಳು. ಪಿತೃ ಸತ್ತಾತ್ಮಕ ವ್ಯವಸ್ಥೆಯ ಅತ್ಯಂತ ಕ್ರೂರ ನಿಶಾನೆಗಳನ್ನು ಆಕೆ ಮಹಿಳೆಯರ ದೇಹದ ಮೇಲೆ ನೋಡಿದಳು. ಯೋನಿಚ್ಛೇದನದ ಪರಿಣಾಮವಾಗಿ ಉಂಟಾದ ತೊಂದರೆಗಳನ್ನು, ಅದರಲ್ಲೂ ವಿಶೇಷವಾಗಿ ಮಗುವನ್ನು ಹೆರುವಾಗ ಉಂಟಾಗುವ ಮಾರಣಾಂತಿ-ಕ ನೋವನ್ನು ಅನುಭವಿಸುತ್ತಾ ಹೆಣ್ಣು ಮಕ್ಕಳು ಸಾಯುವುದನ್ನು, ಶಿಶು ಹೊರಗೆ ಬರಲು ಸಾಧ್ಯವಾಗದೆ ಮರಣ ಹೊಂದುವುದನ್ನು ನೋಡಿ ಅತ್ಯಂತ ಬೇಸರ ಪಟ್ಟುಕೊಂಡಳು. ಹೆಣ್ಣು ಮಕ್ಕಳು ವಿಷಮ ವಿವಾಹದ ಸುಳಿಯಲ್ಲಿ ಸಿಲುಕಿ ಹೊರ ಬರಲಾರದೆ ಒದ್ದಾಡುವುದನ್ನು ನೋಡಿ ಮಾನಸಿಕವಾಗಿ ಕಂಗೆಟ್ಟ ಆಕೆ ಇನ್ನು ಸುಮ್ಮನಿರಬಾರದು ಎಂದು ಪಣತೊಟ್ಟಳು.

1969 ರಲ್ಲಿ ಆಕೆ ವಿಮೆನ್ ಅಂಡ್ ಸೆಕ್ಸ್ ಎಂಬ ಪುಸ್ತಕ ಬರೆದಳು... ಆ ಪುಸ್ತಕದಲ್ಲಿ ಹೆಣ್ಣು ಮಕ್ಕಳ ಯೋನಿಚ್ಛೇದನದ ಕುರಿತು ಹಾಗೂ ಹೆಣ್ಣು ಮಕ್ಕಳ ದೇಹದ ಮೇಲೆ ವ್ಯವಸ್ಥಿತವಾದ ನಿಯಂತ್ರಣವನ್ನು ಹೊಂದಿರುವ ಲೈಂಗಿಕ ಶೋಷಣೆಯ ವಿರುದ್ಧ ಆಕೆ ಬರೆದಳು. ಪಿತೃಸತ್ತಾತ್ಮಕ ಮತ್ತು ಹೆಣ್ಣು ಮಕ್ಕಳನ್ನು ತೊತ್ತು ಎಂದು ಭಾವಿಸುತ್ತಿದ್ದ ಈಜಿಪ್ಟ್ ದೇಶದಲ್ಲಿ ಆಕೆಯ ಪುಸ್ತಕ ಸಂಚಲನವನ್ನು ಉಂಟು ಮಾಡಿತು. ಅತ್ಯಂತ ತೀವ್ರವಾಗಿ ವರ್ತಿಸಿದ ಸರಕಾರವು ಆಕೆಯನ್ನು ಸಾರ್ವಜನಿಕ ಆರೋಗ್ಯದ ನಿರ್ದೇಶಕಿಯ ಹುದ್ದೆಯಿಂದ ಕಿತ್ತು ಹಾಕಿತು. ಆಕೆಯ ಬರಹಗಳನ್ನು ಪ್ರಕಟಿಸದಂತೆ ಪ್ರತಿಬಂಧವನ್ನು ಹೇರಲಾಯಿತು. ಈಗಾಗಲೇ ಆಕೆಯ ಬರಹವನ್ನು ಪ್ರಕಟಿಸಿದ ಪತ್ರಿಕಾ ಮ್ಯಾಗಜಿನನ ಪ್ರಕಟಣೆಯನ್ನು ನಿಲ್ಲಿಸಲಾಯಿತು. ಈಜಿಪ್ಟ್ ನ ಅಧಿಕಾರಶಾಹಿ ಜನರು ಆಕೆಯ ಧ್ವನಿಯನ್ನು ಹತ್ತಿಕ್ಕಲು ಪ್ರಯತ್ನಿಸಿದರು.... ಆದ-'ರೆ ನವಲ್ ಬರೆಯುವುದನ್ನು ನಿಲ್ಲಿಸಲಿಲ್ಲ. 1975ರಲ್ಲಿ ಆಕೆ 'ವುಮೆನ್ ಅಟ್ ಪಾಯಿಂಟ್ ಜೀರೋ' ಎಂಬ ಕಾದಂಬರಿಯನ್ನು ರಚಿಸಿದಳು. ಮಹಿಳೆಯೊಬ್ಬಳ ಬದುಕಿನ ಸತ್ಯ ಕಥೆಯನ್ನು ಈ ಕಾದಂಬರಿ ಒಳಗೊಂಡಿತ್ತು. ಮನಶಾಸ್ತ್ರಜ್ಞಳಾಗಿ ಜೈಲೊಂದರಲ್ಲಿ ಆಕೆ ಕಾರ್ಯನಿರ್ವಹಿಸುವಾಗ ಆಕೆಗೆ ಪರಿಚಯವಾದ ಗಲ್ಲು ಶಿಕ್ಷೆಗೆ ಗುರಿಯಾದ ಲೈಂಗಿಕ ಕಾರ್ಯಕರ್ತೆ ತನ್ನನ್ನು ಈ ಕೆಲಸಕ್ಕೆ ಹಚ್ಚಿದ ತಲೆ ಹಿಡುಕನನ್ನು ಕೊಂದು ಹಾಕಿದ್ದ ಕರುಣಾಜನಕ ಕಥೆ ಅದಾಗಿತ್ತು. ಆಕೆಯ ಬದುಕಿನ ಕುರಿತಾದ ಈ ಪುಸ್ತಕ ಅರಬ್ ನಾಡಿನ ಸ್ತ್ರೀವಾದದ ಕುರಿತಾದ ಮೊಟ್ಟಮೊದಲ ಸಾಹಿತ್ಯ ಕೃತಿಯಾಗಿತ್ತು 1981ರ ಸುಮಾರಿಗೆ ನವಲ್ ಎಲ್ ಸಾದಾವಿಯನ್ನು ಸಹಿಸುವುದು ಅಲ್ಲಿನ ಆಡಳಿತ ಶಾಹಿ ದೊರೆಗಳಿಗೆ ಅಸಾಧ್ಯವಾಗಿತ್ತು. ಅಂದಿನ ಈಜಿಪ್ಟ್ ನ ಅಧ್ಯಕ್ಷರಾದ ಅನ್ವರ್ ಸಾಧತ್ ಈಜಿಪ್ಟ್ ದೇಶವನ್ನು ಪ್ರಜಾಪ್ರಭುತ್ವ ದೇಶವೆಂದು ಯಾವುದೇ ರೀತಿಯ ವಿಮರ್ಶೆಯನ್ನು ಅದು ಮುಕ್ತ ಹಸ್ತದಿಂದ ಸ್ವಾಗತಿಸುತ್ತದೆ ಎಂದು ಹೇಳುತ್ತಿದ್ದ... ಆದರೆ ನವಲ್ ಳನ್ನು ಬಲ್ಗೆರಿಯಾ ದೇಶದ ಜೊತೆಗೂಡಿ ತನ್ನ ದೇಶದ ಮೇಲೆ ಪಿತೂರಿ ಮಾಡಿರುವ ಆಪಾದನೆಯ ಮೇಲೆ ಜೈಲಿಗಟ್ಟಿದ.ಆಕೆಯ ನಿಜವಾದ ಅಪರಾಧ ಸತ್ಯವನ್ನು ಮಾತನಾಡಿದ್ದಾಗಿತ್ತು. 1981ರ ಸೆಪ್ಟೆಂಬರ್ ತಿಂಗಳಲ್ಲಿ ತನ್ನ 50ನೇ ವಯಸ್ಸಿನಲ್ಲಿ ಆಕೆಯನ್ನು ಖಾನತೀರ್ ಎಂಬ ಮಹಿಳಾ ಖೈದಿಗಳ ಜೈಲಿನಲ್ಲಿ ಸೆರೆಯಡಲಾಯಿತು. ಸರ್ಕಾರದ ವಿರುದ್ಧ ಆಕೆ ಬರೆಯದಿರುವಂತೆ ಆಕೆಗೆ ಪೆನ್ನು ಮತ್ತು ಪೇಪರುಗಳನ್ನು ಕೊಡುವುದನ್ನು ನಿಷೇಧಿಸಲಾಯಿತು ಆದರೆ ಆಕೆಯ ಜೊತೆಗೆ ಇದ್ದ ಓರ್ವ ಮಹಿಳಾ ಕೈದಿ ಆಕೆಗೆ ಹುಬ್ಬನ್ನು ತೀಡುವ ಪೆನ್ಸಿಲ್ ಅನ್ನು ನೀಡುವ ಮೂಲಕ ಸಹಾಯ ಮಾಡಿದಳು. ಆ ಪೆನ್ಸಿಲ್ ನಿಂದ ಬಳಸಿ ಬಿಸಾಡುವ ಟಿಶ್ಯು ಪೇಪರ್ ಮೇಲೆ ತನ್ನನ್ನು ಕಾಡುವ ಯೋಚನೆಗಳನ್ನು, ಕಥೆಗಳನ್ನು ಹಾಗೂ ತನ್ನ ಸುತ್ತಲಿನ ಮಹಿಳೆಯರ ಬದುಕಿನ ಕರಾಳ ಪುಟಗಳನ್ನು ಅತ್ಯಂತ ಸೂಕ್ಷ್ಮವಾಗಿ ಗಮನಿಸಿ ಆಕೆ ಬರೆಯುತ್ತಿದ್ದಳು. ರಾಜಕೀಯ ಕೈದಿಗಳು ಹಾಗೂ ಪಿತೃ ಸತ್ತಾತ್ಮಕ ವ್ಯವಸ್ಥೆಯ ನಿಯಂತ್ರಣಗಳ ಕುರಿತು ಬರೆಯುತ್ತಿದ್ದಳು... ಹಾಗೆ ಅವರು ಕದ್ದು ಬರೆದ ಸಾಗಿಸಿದ ಟಿಪ್ಪಣಿಗಳು ಮುಂದೆ ಹೆಣ್ಣು ಮಕ್ಕಳ ಸೆರೆಮನೆಯ ನೆನಪಿನ ಆತ್ಮ ಚರಿತ್ರೆಯ ಸಂಚಿಕೆಗಳಾದವು ಆದರೆ ಆಕೆ ಅದಕ್ಕಿಂತ ತೀವ್ರವಾದ ಕೆಲಸವೊಂದನ್ನು ಜೈಲಿನಲ್ಲಿದ್ದುಕೊಂಡೆ ನಿರ್ವಹಿಸಿದ್ದರು. 1986ರಲ್ಲಿ ಇನ್ನೂ ಸರಳುಗಳ ಹಿಂದೆ ಇರುವಾಗಲೇ ಆಕೆ 'ಅರಬ್ ವುಮನ್ಸ್ ಸಾಲಿಡರಿಟಿ ಅಸೋಸಿಯೇಷನ್' ಎಂಬ ಮೊದಲ ಕಾನೂನಾತ್ಮಕ ಸ್ವತಂತ್ರ್ಯ ಸ್ತ್ರೀ ವಾದಿ ಸಂಘಟನೆಯನ್ನು ಈಜಿಪ್ಟನಲ್ಲಿ ಹುಟ್ಟು ಹಾಕಿದರು. ಜೈಲಿನ ಒಳಗೆ ಇದ್ದುಕೊಂಡೆ ಆಕೆ ದೊಡ್ಡದೊಂದು ಚಳುವಳಿಗೆ ನಾಂದಿ ಹಾಡಿದಳು ಈಜಿಪ್ಟ್ ನ ನಿರಂಕುಶ ಅಧ್ಯಕ್ಷ ಸಾಧತ್ ಅವರ ಹತ್ಯೆಯ ಎರಡು ತಿಂಗಳ ನಂತರ 1981ರ ಅಕ್ಟೋಬರ್ ತಿಂಗಳಲ್ಲಿ ಆಕೆಯನ್ನು ಬಿಡುಗಡೆ ಮಾಡಲಾಯಿತು. ಹಾಗೆ ಬಿಡುಗಡೆಗೊಂಡು ಮನೆಗೆ ಮರಳಿದ ಆಕೆ ತೀವ್ರವಾಗಿ ತನ್ನ ಸಂಘಟನೆಯ ಕೆಲಸ ಕಾರ್ಯಗಳಲ್ಲಿ ತೊಡಗಿಕೊಂಡಳು...ಬೆದರಿಕೆಗಳು ಇನ್ನಷ್ಟು ಹೆಚ್ಚಾದವು.

1990ರಲ್ಲಿ ಇಸ್ಲಾಮಿಕ್ ಮೂಲಭೂತವಾದಿಗಳು ಆಕೆಯನ್ನು ತಾವು ಹತ್ಯೆ ಮಾಡುವ ಜನರ ಪಟ್ಟಿಯಲ್ಲಿ ಸೇರಿಸಿದರು... ಸರ್ಕಾರವು ಆಕೆಗೆ ರಕ್ಷಣೆ ನೀಡಲು ಸಶಸ್ತ್ರ ಕಾವಲುಪಡೆಯನ್ನು ಕೊಡುವುದಾಗಿ ಹೇಳಿದರೂ ಆಕೆ ಒಪ್ಪಲಿಲ್ಲ 1993ರಲ್ಲಿ ಆಕೆ ಅಮೆರಿಕಾದ ಸಂಂ-ಯುಕ್ತ ಸಂಸ್ಥಾನಕ್ಕೆ ವಲಸೆ ಹೋದಳು ಅಲ್ಲಿ ಆಕೆ ಡ್ಯೂಕ್, ಹಾರ್ವರ್ಡ್, ಏಲ್, ಕೊಲಂಬಿಯಾ ಮತ್ತು ಬರ್ಕಲಿ ವಿಶ್ವವಿದ್ಯಾಲಯಗಳಲ್ಲಿ ಶಿಕ್ಷಕಿಂ-ಯಾಗಿ ಕಾರ್ಯನಿರ್ವಹಿಸಿದಳು. ಇಡೀ ಜಗತ್ತನ್ನು ಸುತ್ತಿ ಉಪನ್ಯಾಸಗಳನ್ನು ನೀಡಿದಳು. 50ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಳು... ಆಕೆಯ ಬಹುತೇಕ ಪುಸ್ತಕಗಳು 20ಕ್ಕೂ ಹೆಚ್ಚು ಭಾಷೆಗಳಲ್ಲಿ ಅನುವಾದ ಗೊಂಡವು. 1996ರಲ್ಲಿ ಈಜಿಪ್ಟ್ ದೇಶಕ್ಕೆ ಮರಳಿ ಬಂದ ಆಕೆ ಮತ್ತಷ್ಟು ಬಲಿಷ್ಠವಾಗಿದ್ದಳು. ಈ ಹಿಂದಿಗಿಂತ ತುಸು ಹೆಚ್ಚು ಗಟ್ಟಿಯಾಗಿ ಮಾತನಾಡುವ ಛಾತಿಯನ್ನು ಹೆಚ್ಚಿಸಿಕೊಂಡಿದ್ದಳು. 2005ರಲ್ಲಿ ತನ್ನ 74ನೇ ವಯಸ್ಸಿನಲ್ಲಿ ಆಕೆ ಅಂದಿನ ಈಜಿಪ್ಟ್ ನ ದೀರ್ಘಕಾಲೀನ ಸರ್ವಾಧಿಕಾರಿ ಅಧ್ಯಕ್ಷರಾದ ಹೊಸ್ನಿ ಮುಬಾರಕ್ ಅವರ ವಿರುದ್ಧ ಚುನಾವಣೆಗೆ ನಿಂತಳು. ತಾನು ಖಂಡಿತವಾಗಿಯೂ ಆತನ ವಿರುದ್ಧ ಗೆಲ್ಲುವುದಿಲ್ಲ ಎಂಬುದು ಆಕೆಗೆ ಗೊತ್ತಿತ್ತು... ಆದ-'ರೆ ಹೆಣ್ಣು ಮಕ್ಕಳು ಎಲ್ಲ ಕಡೆಯೂ ಸಲ್ಲುವರು ಎಂಬುದನ್ನು ಸಾಬೀತುಪಡಿಸಲು ಅದರಲ್ಲೂ ದೇಶದ ಅತ್ಯುನ್ನತ ಅಧಿಕಾರದ ಸ್ಥಾನವನ್ನು ತಲುಪಬಲ್ಲರು ಎಂಬುದನ್ನು ಎಲ್ಲರಿಗೂ ಗೊತ್ತು ಪಡಿಸಲು ಆಕೆ ಈ ದಿಟ್ಟ ಹೆಜ್ಜೆ ಇಟ್ಟಿದ್ದರು.
ತನ್ನ ಇಡೀ ಬದುಕಿನುದ್ದಕ್ಕೂ ಪ್ರತಿಬಂಧಕ ಆಜ್ಞೆಗಳು, ಜೈಲುವಾಸ, ಸಾಯಿಸುವ ಭಯಾನಕ ಬೆದರಿಕೆಗಳು, ಅಪವಾದಗಳ ಜೊತೆ ಜೊತೆಗೆ ಪದೇ ಪದೇ ಆಕೆ ಆರಂಭಿಸಿದ ಸಂಸ್ಥೆಗಳನ್ನು ಮುಚ್ಚುವ ಕೆಲಸವನ್ನು ಸರ್ಕಾರಗಳು ಮಾಡಿದರೂ ಕೂಡ ಆಕೆ ಹಿಂದೆಟು ಹಾಕಲಿಲ್ಲ ಆಕೆಯ ಪುಸ್ತಕಗಳಿಗೆ ನಿಷೇಧ ಹೇ-ರಿದರೂ ಆಕೆ ಬೆದರಲಿಲ್ಲ. ಧಾರ್ಮಿಕ ಸಂಘಟನೆಗಳು ಆಕೆಯ ಪತಿಯನ್ನು ಆಕೆಯ ವಿರುದ್ಧ ವಿಚ್ಛೇದನ ಮಾಡಿಕೊಳ್ಳಲು ಒತ್ತಾಯಿಸಿ ಸಫಲರಾದಾಗಲೂ ಕೂಡ ಆಕೆ ಹಿಂಜರಿಯಲಿಲ್ಲ... ಆಕೆ ತನ್ನ ಬದುಕಿನಲ್ಲಿ ಎಲ್ಲವನ್ನು ಸಹಿಸಿ ಅದಕ್ಕಿಂತ ಎತ್ತರ ಬೆಳೆದಳು. ಮಾರ್ಚ್ 21 2018 ರಲ್ಲಿ ತನ್ನ 89ನೇ ವಯಸ್ಸಿನಲ್ಲಿ ನವಲ್ ಎಲ್ ಸದಾವಿ ಕೈರೋ ನಗರದಲ್ಲಿ ಮರಣ ಹೊಂದಿದರು. ಅರಬ್ ಜಗತ್ತಿನ ಸಿಮೋನೆ ಡಿ ಬ್ಯೂವಾಯ್ರ್ ಎಂದು ಆಕೆ ಕರೆಯಲ್ಪಟ್ಟಳು.

ಅರಬ್ ಜಗತ್ತಿನಲ್ಲಿ ಸ್ತ್ರೀವಾದ ಹಿರಿಯಜ್ಜಿಯಾಗಿ ಆಕೆ ಗುರುತಿಸಿಕೊಂಡಳು. ಇಂದಿಗೂ ಕೂಡ ಆಕೆಯ ಸ್ತ್ರೀವಾದದ ಹೆಜ್ಜೆ ಗುರುತುಗಳನ್ನು ತಲೆಮಾರುಗಳು ನೆನಪಿಟ್ಟುಕೊಳ್ಳುತ್ತವೆ... ಸ್ತ್ರೀವಾದ ಎಂಬುದು ಬೇರೆ ದೇಶದಿಂದ ಆಮದು ಮಾಡಿಕೊಳ್ಳಬಹುದಾದ ಗುರುತಲ್ಲ ಬದಲಾಗಿ ತಮ್ಮದೇ ನೆಲದ ಹೆಣ್ಣು ಮಕ್ಕಳ ಮನದಾಳದ ಧೈರ್ಯದ ಬೇರುಗಳ ಮೂಲಕ ಚಿಗುರೊಡೆಯುತ್ತದೆ ಎಂಬುದನ್ನು ಆಕೆ ಜಗತ್ತಿಗೆ ತೋರಿಸಿ ಕೊಟ್ಟಳು. ಇದೀಗ ಆಜು ಆಧುನಿಕ ದೇಶದ ಸ್ತ್ರೀವಾದಿಗಳಾದ ಮೋನಾ ಯಲ್ತಾವಿ ಸಹಿತವಾಗಿ ಎಲ್ಲರೂ ಆಕೆಯನ್ನು ಅರಬ್ ದೇಶದ ಹೆಣ್ಣು ಮಕ್ಕಳಿಗೆ ತಮ್ಮ ಹಕ್ಕುಗಳಿಗಾಗಿ ಹೋರಾಡುವುದನ್ನು ಕಲಿಸಿದ ಮಾತೆ ಎಂದು ನೆನೆಯುತ್ತಾರೆ
ನವಲಳ ಹೋರಾಟ ಕೇವಲ ಆಕೆಗಾಗಿ ಮಾತ್ರವಾಗಿರಲಿಲ್ಲ ಬದಲಾಗಿ ಆಕೆಯ ಇಡೀ ಜನಾಂಗದ ಹೋರಾಟವಾಗಿತ್ತು... ಮೌನದಲ್ಲಿಯೇ ಅಸಾಧ್ಯ ನೋವನ್ನು ಭರಿಸುತ್ತಿದ್ದ ಹೆಣ್ಣು ಮಕ್ಕಳ ಪರವಾಗಿತ್ತು ಅತ್ಯಂತ ಸ್ಪಷ್ಟವಾಗಿ ಈ ಜಗತ್ತಿಗೆ 'ನೀವು ನನಗೆ ಕೊಡ ಮಾಡುವ ಬದುಕನ್ನು ನಾನು ಬದುಕಮೊಲ್ಲೆ... ನನ್ನ ಬದುಕನ್ನು ನಾನು ಹೇಗೆ ಬದುಕಬೇಕು ಎಂಬುದನ್ನು ಅರಿತಿದ್ದು ನನ್ನ ಆಯ್ಕೆಯ ಬದುಕನ್ನೇ ನಾನು ಬದುಕುತ್ತೇನೆ' ಎಂದು ಸಾರಿ ಹೇಳಿದ ನವಲ್.ಎಲ್. ಸಾದಾವಿಗೆ ಗೌರವಪೂರ್ವಕ ನಮನಗಳು.



ವೀಣಾ ಹೇಮಂತ್ ಗೌಡ ಪಾಟೀಲ್

## ಹನುಮಾನ್ ಮಂದಿರದಲ್ಲಿ ನಮಾಜ್ ಮಾಡಿದವರ ವಿರುದ್ಧ ಎಫ್‌ಐಆರ್



**ಬುಲಂದ್‌ಶಹರ್:** ಉತ್ತರಪ್ರದೇಶದ ಹಳ್ಳಿಯೊಂದರ ಹನುಮಾನ್ ದೇವಸ್ಥಾನದೊಳಗೆ ವ್ಯಕ್ತಿಯೊಬ್ಬ ನಮಾಜ್ ಮಾಡುತ್ತಿರುವ ವಿಡಿಯೋ ಸಾಮಾಜಿಕ ಮಾಧ್ಯಮದಲ್ಲಿ ಭಾರಿ ವೈರಲ್ ಆಗಿದೆ.ಈ ವಿಷಯ ಭಾರಿ ಸದ್ದು ಮಾಡುತ್ತಿದ್ದಂತೆ ಎಚ್ಚೆತ್ತುಕೊಂಡಿರುವ ಪೊಲೀಸರು ನಮಾಜ್ ಮಾಡಿದ ಮೂವರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪೊಲೀಸರ ಪ್ರಕಾರ, ಮೇ 31 ರಂದು ಔರಂಗಾಬಾದ್ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮದಲ್ಲಿ ಈ ಘಟನೆ ನಡೆದಿದ್ದು, ಅಸರ್ ಮೊಹಮ್ಮದ್ ತನ್ನ ಸಹಚರ ನಜರ್ ಮೊಹಮ್ಮದ್ ಮತ್ತು ಇತರರೊಂದಿಗೆ ರಾಜ್‌ಕುಮಾರ್ ಅವರ ಮನೆಗೆ ಕಲ್ಲು ಕೆಲಸ ಮಾಡಲು ಹೋಗಿದ್ದರು. ಸ್ವಲ್ಪ ಸಮಯದವರೆಗೆ ಕೆಲಸ ಮಾಡಿದ ನಂತರ, ಕಾರ್ಮಿಕರು ಊಟದ ವಿರಾಮವನ್ನು ತೆಗೆದುಕೊಂಡರು, ಆ ಸಮಯದಲ್ಲಿ ಅಸರ್ ಮೊಹಮ್ಮದ್ ಸಣ್ಣ ಮಳೆಯ ನಡುವೆಯೂ ದೇವಾಲಯದೊಳಗೆ ನಮಾಜ್ ಮಾಡಿದ್ದರು ಎಂದು ಹೇಳಲಾಗುತ್ತದೆ. ಆ ಸಮಯದಲ್ಲಿ ನಜರ್ ಮೊಹಮ್ಮದ್ ಸ್ಥಳದಲ್ಲಿದ್ದರು. ಆಪಾದಿತ ಘಟನೆಯ ವೀಡಿಯೊವನ್ನು ನಂತರ ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರ ಮಾಡಲಾಯಿತು, ಇದು ಗ್ರಾಮಸ್ಥರಲ್ಲಿ ಅಸಮಾಧಾನವನ್ನು ಉಂಟುಮಾಡಿತು. ತನಿಖೆಯ ಸಮಯದಲ್ಲಿ, ಘಟನೆಗಳ ಅನುಕ್ರಮವು ಪ್ರಾಥಮಿಕವಾಗಿ ಸರಿಯಾಗಿದೆ ಎಂದು ಪೊಲೀಸರು ಕಂಡುಕೊಂಡರು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪೂಜಾ ಸ್ಥಳವನ್ನು ಅಪವಿತ್ರಗೊಳಿಸುವ ಮೂಲಕ ಹಿಂದೂ ಸಮುದಾಯದ ಧಾರ್ಮಿಕ ಭಾವನೆಗಳನ್ನು ಅವಮಾನಿಸುವ ಗುರಿಯನ್ನು ಈ ಕೃತ್ಯ ಹೊಂದಿದೆ ಎಂದು ಪೊಲೀಸರು ಆರೋಪಿಸಿದ್ದಾರೆ.ಔರಂಗಾಬಾದ್‌ನ ಎಸ್‌-ಎಸ್‌ಒ ಮೊಹಮ್ಮದ್ ಅಸ್ಲಾಂ ಅವರು ಎಫ್‌ಐಆರ್ ದಾಖಲಿಸಲಾಗಿದ್ದು, ಈ ವಿಷಯ ತನಿಖೆಯಲ್ಲಿದೆ ಎಂದು ತಿಳಿಸಿದ್ದಾರೆ.

## ಪರಮಾಣು ಬಾಂಬ್ ಇಂಧನ ಉತ್ಪಾದನೆಗೆ ಮುಂದಾದ ಉತ್ತರ ಕೊರಿಯಾ



**ಸಿಯೋಲ್:** ಉತ್ತರ ಕೊರಿಯಾ ಇಂದು ಪರಮಾಣು ಬಾಂಬ್ ಇಂಧನಗಳನ್ನು ಉತ್ಪಾದಿಸಲು ಹೊಸ ಸೌಲಭ್ಯವನ್ನು ಅನಾವರಣಗೊಳಿಸಿದೆ.ಕೊರಿಯಾ ನಾಯಕ ಕಿಮ್ ಜಾಂಗ್ ಉನ್ ದೇಶದ ಪರಮಾಣು ಪಡೆಗಳನ್ನು ಘಾತೀಯ ದರದಲ್ಲಿ ಬಲಪಡಿಸುವ ಯೋಜನೆಗಳನ್ನು ಘೋಷಿಸಿದ್ದಾರೆ.

ದಕ್ಷಿಣ ಕೊರಿಯಾದ ಜಂಟಿ ಮುಖ್ಯಸ್ಥರು ಈ ಸ್ಥಳವನ್ನು ಯುರೇನಿಯಂ ಪುಷ್ಟೀಕರಣ ಘಟಕವೆಂದು ನಿರ್ಣಯಿಸಿದರು ಮತ್ತು ಉತ್ತರ ಕೊರಿಯಾದ ಪರಮಾಣು ಚಟುವಟಿಕೆಗಳನ್ನು ಮೇಲ್ವಿಚಾರಣೆ ಮಾಡಲು ಅಮೆ-ರಿಕದೊಂದಿಗೆ ನಿಕಟವಾಗಿ ಸಮನ್ವಯ ಸಾಧಿಸುತ್ತಿದ್ದಾರೆ ಎಂದು ಹೇಳಿದರು. ದಕ್ಷಿಣದ ಮಿಲಿಟರಿ ತಕ್ಷಣವೇ ಹೆಚ್ಚಿನ ವಿವರಗಳನ್ನು ಬಿಡುಗಡೆ ಮಾಡಲಿಲ್ಲ.ಉತ್ತರದ ಅಧಿಕೃತ ಕೊರಿಯನ್ ಸೆಂಟ್ರಲ್ ನ್ಯೂಸ್ ಏಜೆನ್ಸಿ ಈ ಸೌಲಭ್ಯವು ಹೆಚ್ಚು ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿದೆ ಎಂದು ಹೇಳಿದೆ ಆದರೆ ಹೆಚ್ಚಿನ ವಿವರಗಳನ್ನು ನೀಡಲಿಲ್ಲ. ಸ್ಥಾವರ ಎಲ್ಲಿದೆ ಅಥವಾ ಅದು ಯಾವಾಗ ಕಾರ್ಯಾಚರಣೆಯನ್ನು ಪ್ರಾರಂಭಿಸಿತು ಎಂಬುದು ಸ್ಪಷ್ಟವಾಗಿಲ್ಲ.ಶಸ್ತ್ರಾಸ್ತ್ರ-ದರ್ಜೆಯ ಯುರೇನಿಯಂ ಅನ್ನು ಪುನರುಜ್ಜೀವನಗೊಳಿಸಲು ಅಗತ್ಯವಿರುವ ಸೆಂಟ್ರಿಫ್ಯೂಜ್‌ಗಳನ್ನು ಹೊಂದಿರುವ ದೊಡ್ಡ ಹಾಲ್‌ನಂತೆ ಕಾಣುವದನ್ನು ರಾಜ್ಯ ಮಾಧ್ಯಮ ಫೋಟೋಗಳು ತೋ-ರಿಸಿವೆ.ಹೊಸ ಕಾರ್ಖಾನೆಯ ಬಹಿರಂಗಪಡಿಸುವಿಕೆಯು ಕಿಮ್ ಅವರು ಹೆಚ್ಚುತ್ತಿರುವ ಯುಎಸ್ ನೇತೃತ್ವದ ಮಿಲಿಟರಿ ಬೆದರಿಕೆಗಳನ್ನು ನಿಭಾಯಿಸಲು ತನ್ನ ಪರಮಾಣು ಶಸ್ತ್ರಾಸ್ತ್ರಗಳ ಕಾರ್ಯಕ್ರಮವನ್ನು ವಿಸ್ತರಿಸಲು ಪುನರಾವರ್ತಿತ ಪ್ರತಿಜ್ಞೆಗಳಿಗೆ ಅನುಗುಣವಾಗಿದೆ. ಅದರ ಕಾರ್ಯಾಚರಣೆಗಳು ಮತ್ತು ಅದರ ದೀರ್ಘಕಾಲೀನ ಉತ್ಪಾದನಾ ಯೋಜನೆಯ ಬಗ್ಗೆ ತಿಳಿದುಕೊಳ್ಳಲು ಕಿಮ್ ಬುಧವಾರ ಪರಮಾಣು ಸೌಲಭ್ಯಕ್ಕೆ ಭೇಟಿ ನೀಡಿದ್ದಾರೆ ಎಂದು ಕೆಸಿಎನ್‌ಎ ಹೇಳಿದೆ.ಅತ್ಯಂತ ಉಗ್ರ ಶತ್ರುಗಳೊಂದಿಗಿನ ಮುಖಾಮುಖಿಗಳಿಂದಾಗಿ, ಗುಣಮಟ್ಟ ಮತ್ತು ಪ್ರಮಾಣದಲ್ಲಿ ದೇಶದ ಪರಮಾಣು ಯುದ್ಧ ನಿರೋಧಕ ಶಕ್ತಿಯನ್ನು ಬಲಪಡಿಸುವ ತುರ್ತು ಹೆಚ್ಚಾಗಿದೆ ಎಂದು ಕಿಮ್ ಹೇಳಿರುವುದಾಗಿ ಉಲ್ಲೇಖಿಸಿದೆ. ಇದು ಯುನೈಟೆಡ್ ಸ್ಟೇಟ್?ಸ ಮತ್ತು ದಕ್ಷಿಣ ಕೊರಿಯಾವನ್ನು ಸ್ಪಷ್ಟವಾಗಿ ಉಲ್ಲೇಖಿಸುತ್ತದೆ. ಉತ್ತರ ಕೊರಿಯಾದ ಪರಮಾಣು ಸಾಮರ್ಥ್ಯವನ್ನು ಹೆಚ್ಚಿಸುವ ಅಗತ್ಯವಾಗಿ ಕಿಮ್ ಇತರ ಅನಿರ್ದಿಷ್ಟ ಬೆದರಿಕೆಗಳು ಮತ್ತು ಬಿಕ್ಕಟ್ಟುಗಳನ್ನು ಉಲ್ಲೇಖಿಸಿದ್ದಾರೆ ಎಂದು ಅದು ಹೇಳಿದೆ.ಐದು ವರ್ಷಗಳ ಹಿಂದಿನದಕ್ಕೆ ಹೋಲಿಸಿದರೆ ಉತ್ತರ ಕೊರಿಯಾದ ಶಸ್ತ್ರಾಸ್ತ್ರ-ದರ್ಜೆಯ ಪರಮಾಣು ವಸ್ತುಗಳ ಉತ್ಪಾದನಾ ಸಾಮರ್ಥ್ಯವು ದುಪ್ಪಟ್ಟಾಗಿದೆ ಎಂದು ಕಿಮ್ ಹೇಳಿಕೊಂಡಿದ್ದಾರೆ ಎಂದು ತಿಳಿಸಿದೆ.

# ಉತ್ತರ ಪ್ರದೇಶ : ಉದ್ಯಮಿಯ ಹತ್ಯೆ ಪ್ರಕರಣದ ಪ್ರಮುಖ ಆರೋಪಿ ಎನ್‌ಕೌಂಟರ್‌ನಲ್ಲಿ ಫಿನಿಷ್

**ಗಾಜೀಪುರ:** ಉದ್ಯಮಿಯ ಹತ್ಯೆ ಪ್ರಕರಣದಲ್ಲಿ ಬೇಕಾಗಿದ್ದ ಹಾಗೂ ಪತ್ತೆಗೆ 1 ಲಕ್ಷ ಬಹುಮಾನ ಘೋಷಿಸಲಾಗಿದ್ದ ಆರೋಪಿಯೊಬ್ಬ ತಡರಾತ್ರಿ ಉತ್ತರ ಪ್ರದೇಶದ ಗಾಜೀಪುರ ಜಿಲ್ಲೆಯಲ್ಲಿ ನಡೆದ ಪೊಲೀಸ್ ಎನ್‌ಕೌಂಟರ್‌ನಲ್ಲಿ ಮೃತಪಟ್ಟಿದ್ದಾನೆ.

ಮೃತ ಆರೋಪಿಯನ್ನುಕಮಲೇಶ್ ಚೌಧರಿ ಅಲಿಯಾಸ್ ಕಮಲೇಶ್ ಬಿಂದ್-ಎಂದು ಗುರುತಿಸಲಾಗಿದೆ. ಕಳೆದ ಮೇ 29ರಂದು ಗಾಜೀಪುರದ ಉದ್ಯಮಿ ವಿನೀತ್ ರೈ ಅವರ ಹತ್ಯೆ ಪ್ರಕರಣದಲ್ಲಿ ಕಮಲೇಶ್ ಪ್ರಮುಖ ಆರೋಪಿಗಳಲ್ಲಿ ಒಬ್ಬನಾಗಿದ್ದನು. ಈ ಪ್ರಕರಣದಲ್ಲಿ ಒಟ್ಟು ನಾಲ್ವರು ಬಾಗಿಯಾಗಿದ್ದರು ಎಮದು ಗೊತ್ತಾಗಿತ್ತು. ಜಿಲ್ಲಾ ಪೊಲೀಸ್ ಅಧೀಕ್ಷಕ ಡಾ. ಇರಾಜ್ ರಾಜಾ ಸುದ್ದಿಗಾರ-ರಿಗೆ ಮಾಹಿತಿ ನೀಡುತ್ತಾ, ಹತ್ಯೆ ನಡೆದ ಬಳಿಕ ಆರೋಪಿಗಳ ಬಂಧನಕ್ಕಾಗಿ ಪೊಲೀಸ್ ತಂಡಗಳು ನಿರಂತರ ಶೋಧ ಕಾರ್ಯಾಚರಣೆ ನಡೆಸುತ್ತಿದ್ದರು ಎಂದು ಹೇಳಿದರು.

ಕಮಲೇಶ್ ಕುರ್ಥಾ ಗ್ರಾಮದ ಸಮೀಪದ ಪವಹಾರಿ ಬಾಬಾ ಆಶ್ರಮದ ಬಳಿ ಅಡಗಿಕೊಂಡಿದ್ದಾನೆ ಎಂಬ ಖಚಿತ



ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಪೊಲೀಸರು ಹಾಗೂ ಸ್ವಾಟ್ ತಂಡ ರಾತ್ರಿ ಆ ಪ್ರದೇಶವನ್ನು ಸುತ್ತುವರೆದರು. ಪೊಲೀಸರು ಹೇಳುವಂತೆ, ನಂಬರ್ ಪ್ಲೇಟ್ ಇಲ್ಲದ ಮೋಟಾರ್‌ಸೈಕಲ್‌ನಲ್ಲಿ ಬರುತ್ತಿದ್ದ ವ್ಯಕ್ತಿಯನ್ನು ನಿಲ್ಲಿಸಲು ಸೂಚಿಸಿದಾಗ, ಆತ ದೂರದಿಂದಲೇ ಪೊಲೀಸರ ಮೇಲೆ ಗುಂಡಿನ ದಾಳಿ ನಡೆಸಿದ್ದಾನೆ. ಇದಕ್ಕೆ ಪ್ರತಿಯಾಗಿ ಪೊಲೀಸರು ಗುಂಡು ಹಾ-ರಿಸಿದ್ದು, ಆರೋಪಿ ಗಾಯಗೊಂಡಿದ್ದಾನೆ. ಗಾಯಗೊಂಡ ಆರೋಪಿಯನ್ನು ಆಸ್ಪತ್ರೆಗೆ ಸಾಗಿಸಲಾಯಿತಾದರೂ, ವೈದ್ಯರು ಆತನನ್ನು ಮೃತ ಎಂದು ಘೋಷಿಸಿದರು.ಎನ್‌ಕೌಂಟರ್ ವೇಳೆ ಸ್ವಾಟ್ ತಂಡದ ಇನ್‌ಚಾರ್ಜ್ ಹಾಗೂ ಉಪನಿರೀಕ್ಷಕ ರೋಹಿತ್ ಮಿಶ್ರಾಅವರ ಭುಜಕ್ಕೆ ಗುಂಡು ತಗುಲಿದ್ದು, ಅವರು ಚಿಕಿತ್ಸೆಪಡೆಯುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಘಟನಾ ಸ್ಥಳದಿಂದ ಅಕ್ರಮ.32 ಬೋರ್ ಪಿಸ್ತೂಲು,ಒಂದು ಜೀವಂತ ಕಾರ್ತೂಸ್ ಹಾಗೂ ಮೋಟಾರ್‌ಸೈಕಲ್ ವಶಪಡಿಸಿಕೊಳ್ಳಲಾಗಿದೆ.ಪೊಲೀಸರ ಪ್ರಕಾರ, ಕಮಲೇಶ್ ವಿರುದ್ಧ 2017ರಿಂದಲೂ ಕೊಲೆ, ಕೊಲೆ ಯತ್ನ, ಅಪಹರಣ, ಹಲ್ಲೆ, ಬೆದರಿಕೆ ಹಾಗೂ ಶಸ್ತ್ರಾಸ್ತ್ರ ಕಾಯ್ದೆ ಸೇರಿದಂತೆ ಏಳು ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದವು. ಈ ಹತ್ಯೆ ಪ್ರಕರಣದ ನಾಲ್ವರು ಆರೋಪಿಗಳ ತಲೆಗೆ ಒಂದು ದಿನ ಮುಂಚೆಯೇ ಬಹುಮಾನ ಘೋಷಿಸಲಾಗಿತ್ತು. ಪ್ರಮುಖ ಆರೋಪಿ ಶಂಕರ್ ಪಾಂಡೆ ಹಾಗೂ ಕಮಲೇಶ್ ತಲೆಗೆ ತಲಾ 1 ಲಕ್ಷ ಬಹುಮಾನ ಘೋಷಿಸಲಾಗಿದ್ದರೆ, ಸಹಚರರಾದ ಸೋನು ಯಾದವ್ ಮತ್ತು ಮೋನು ತ್ರಿಪಾಠಿ ತಲೆಗೆ ತಲಾ 50 ಸಾವಿರ ಬಹುಮಾನ ಘೋಷಿಸಲಾಗಿತ್ತು. ಪ್ರಸ್ತುತ ಶಂಕರ್ ಪಾಂಡೆ, ಸೋನು ಯಾದವ್ ಮತ್ತು ಮೋನು ತ್ರಿಪಾಠಿ ತಲೆಮರೆಸಿಕೊಂಡಿದ್ದು, ಅವ-ರಿಗಾಗಿ ಶೋಧ ಮುಂದುವರಿದಿದೆ.ಪೊಲೀಸರ ತನಿಖೆಯ ಪ್ರಕಾರ, ಗಾಜೀಪುರ ನಗರದಲ್ಲಿರುವ ಹೋಟೆಲ್‌ವೊಂದರ ನಿರ್ವಹಣೆ ಮಾಡುತ್ತಿದ್ದ ವಿನೀತ್ ರೈ ಅವರನ್ನು 1 ಕೋಟಿ ಸುಲಿಗೆ ಹಣ ಬೇಡಿಕೆ ಇಡಲಾಗಿತ್ತು ಅವರು ನಿರಾಕರಿಸಿದ ಕಾರಣ ಮೇ 29ರ ರಾತ್ರಿ ಹತ್ಯೆ ಮಾಡಲಾಗಿದೆ ಎಂದು ಶಂಕಿಸಲಾಗಿದೆ.

ಆ ರಾತ್ರಿ ಊಟ ಮುಗಿಸಿ ಮನೆಗೆ ತೆರಳುತ್ತಿದ್ದ ವೇಳೆ, ಎರಡು ಮೋಟಾರ್‌ಸೈಕಲ್‌ಗಳಲ್ಲಿ ಬಂದ ನಾಲ್ವರು ದುಷ್ಕರ್ಮಿಗಳು ಮೊದಲು ಹೋಟೆಲ್ ಗೇಟ್ ಬಳಿ ಬಿಯರ್ ಖರೀದಿಸುವ ನೆಪದಲ್ಲಿ ಬಂದಿದ್ದರು. ಬಳಿಕ ಅವರು ವಿನೀತ್ ರೈ ಮೇಲೆ ಗುಂಡಿನ ದಾಳಿ ನಡೆಸಿದರು.

ಪಾರಾಗಲು ಯತ್ನಿಸಿದ ರೈ ಮೇಲೆ ಹಲವು ಸುತ್ತು ಗುಂಡು ಹಾರಿಸಲಾಗಿದ್ದು, ಗಂಭೀರವಾಗಿ ಗಾಯಗೊಂಡ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಚಿಕಿತ್ಸೆ ಫಲಕಾ-ರಿಯಾಗದೆ ಅವರು ಮೃತಪಟ್ಟಿದ್ದರು.ಪ್ರಕರಣದ ಕುರಿತು ಹೆಚ್ಚಿನ ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

# ಭಾರತ-ಕಿರ್ಗಿಸ್ತಾನ್ ಕೈಗಾರಿಕೆ ಪಾಲುದಾರಿಕೆ ವೃದ್ಧಿಗೆ ಸಂಕಲ್ಪ : ಹೆಚ್ಡಿಕೆ

**ಬಿಷ್ಕೇಕ್:** ಕೈಗಾರಿಕೋತ್ಪಾದನೆ ವಲಯದಲ್ಲಿ ಪರಸ್ಪರ ಸಹಕಾರ ಹೊಂದುವ ನಿಟ್ಟಿನಲ್ಲಿ ಬಿಷ್ಕೇಕ್‌ಲ್ಲಿ ಕೇಂದ್ರದ ಬೃಹತ್ ಕೈಗಾ-ರಿಕೆ ಮತ್ತು ಉಕ್ಕು ಸಚಿವ ಹೆಚ್.ಡಿ. ಕುಮಾರಸ್ವಾಮಿ ಹಾಗೂ ಕಿರ್ಗಿಸ್ತಾನ್ ಗಣರಾಜ್ಯದ ಆರ್ಥಿಕ ಮತ್ತು ವಾಣಿಜ್ಯ ಸಚಿವ ಬಕಿತ್ ಸಿಡಿಕೋವ್ ಅವರೊಂದಿಗೆ ಮಹತ್ವದ ದ್ವಿಪಕ್ಷೀಯ ಮಾತುಕತೆ ನಡೆಸಿದರು.

ಭಾರತ ಮತ್ತು ಕಿರ್ಗಿಸ್ತಾನ್ ನಡುವೆ ಕೈಗಾರಿಕಾ ಸಂಬಂಧಗಳನ್ನು ಮತ್ತಷ್ಟು ದೃಢಗೊಳಿಸುವ ನಿಟ್ಟಿನಲ್ಲಿ ಇಬ್ಬರೂ ಸಚಿವರು ಉಭಯ ದೇಶಗಳ ನಡುವೆ ಆರ್ಥಿಕ ತೊಡಗಿಸಿಕೊಳ್ಳುವಿಕೆ, ಕೈಗಾರಿಕಾ ಸಹಕಾರ ಮತ್ತು ವ್ಯಾಪಾರ ಪಾಲುದಾರಿಕೆಯನ್ನು ಗಾಢಗೊಳಿಸುವ ಮಾರ್ಗಗಳ ಬಗ್ಗೆ ಚರ್ಚಿಸಿದರು.

ಶಾಂಘೈ ಸಹಕಾರ ಸಂಸ್ಥೆಯ ಕೈಗಾರಿಕಾ ಸಚಿವರ 4ನೇ ಶೃಂಗಸಭೆಯ ಸಂದರ್ಭದಲ್ಲಿ ನಡೆದ ಈ ಸಭೆಯು ಭಾರತ-ಕಿರ್ಗಿಸ್ತಾನ್ ಸಂಬಂಧಗಳಲ್ಲಿ ಆಗುತ್ತಿರುವ ಮುನ್ನಡೆಯನ್ನು ಮತ್ತಷ್ಟು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಹಾಗೂ ಮಧ್ಯ ಏಷ್ಯಾ ಭಾಗದಲ್ಲಿ ತನ್ನ ಆರ್ಥಿಕ ಹೆಜ್ಜೆಗುರುತನ್ನು ವಿಸ್ತರಿಸುವ ನಿಟ್ಟಿನಲ್ಲಿ ಭಾರತದ ಬದ್ಧತೆಯ ಬಗ್ಗೆ ಸಚಿವ ಕುಮಾರಸ್ವಾಮಿ ಅವರು ಕಿರ್ಗಿಜ್ ಸಚಿವರೊಂದಿಗೆ ವಿಸ್ತೃತ ಸಮಾಲೋಚನೆ ನಡೆಸಿದರು.

ಈ ಚರ್ಚೆಯ ಸಮಯದಲ್ಲಿ ದ್ವಿಪಕ್ಷೀಯ ವ್ಯಾಪಾರವನ್ನು ಬಲಪಡಿಸುವುದು, ಕೈಗಾರಿಕಾ ಸಹಕಾರವನ್ನು ವೃದ್ಧಿಸುವುದು, ಹೂಡಿಕೆ



ಅವಕಾಶಗಳನ್ನು ದೊಡ್ಡ ಪ್ರಮಾಣದಲ್ಲಿ ಉತ್ತೇಜಿಸುವುದು ಮತ್ತು ಎರಡೂ ದೇಶಗಳ ವ್ಯವಹಾರಗಳು ಮತ್ತು ಉತ್ಪಾದನಾ ವಲಯಗಳ ನಡುವೆ ಹೆಚ್ಚಿನ ಸಹಯೋಗವನ್ನು ಉತ್ತೇಜಿಸುವ ಕುರಿತು ಸಚಿವರಿಬ್ಬರೂ ಮಾತುಕತೆ ನಡೆಸಿದರು.

ಅಲ್ಲದೆ, ಪರಸ್ಪರ ಪ್ರಯೋಜನಕಾರಿ ಆರ್ಥಿಕ ಪಾಲುದಾ-ರಿಕೆಗಳನ್ನು ಸೃಷ್ಟಿಸಲು ಭಾರತ ಮತ್ತು ಕಿರ್ಗಿಸ್ತಾನ್‌ನ ಪೂರಕ ಸಾಮರ್ಥ್ಯಗಳನ್ನು ಬಳಸಿಕೊಳ್ಳುವ ಅವಕಾಶಗಳನ್ನು ಅವರು ಈ ಸಮಾಲೋಚನೆಯಲ್ಲಿ ಅನ್ವೇಷಿಸಿದರು. ಯುರೇಷಿಯಾ (ಏಷ್ಯಾ-ಯುರೋಪ್) ಭಾಗದಲ್ಲಿ ಬಲವಾದ ಪ್ರಾದೇಶಿಕ ಸಹಕಾರ, ಆರ್ಥಿಕ ಒಗ್ಗೂಡುವಿಕೆ ಮತ್ತು ಸುಸ್ಥಿರ ಅಭಿವೃದ್ಧಿಯನ್ನು ನಿರಂತರವಾಗಿ ಪ್ರತಿಪಾದಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದಲ್ಲಿ ಭಾರತವು ಶಾಂಘೈ ಸಹಕಾರ ಸಂಸ್ಥೆ ಸದಸ್ಯ ರಾಷ್ಟ್ರಗಳೊಂದಿಗೆ ತನ್ನ ಸಂಬಂಧವನ್ನು ಇನ್ನಷ್ಟು ಗಾಢವಾಗಿಸುತ್ತಿರುವುದರಿಂದ ಈ ಸಭೆ ಮಹತ್ವದ್ದಾಗಿದೆ ಎಂದು ಸಚಿವ ಕುಮಾರಸ್ವಾಮಿ ಅವರು ಪ್ರತಿಪಾದಿಸಿದರು. ಶಾಂಘೈ ಸಹಕಾರ ಸಂಸ್ಥೆ ಚೌಕಟ್ಟಿನೊಳಗೆ ಭಾರತದ ಆದ್ಯತೆಗಳನ್ನು ಪ್ರಬಲವಾಗಿ ಪ್ರತಿಪಾದಿಸಿದ ಕೇಂದ್ರ ಸಚಿವರು, ಭದ್ರತೆ, ಆರ್ಥಿಕ ಅಭಿವೃದ್ಧಿ, ಸಂಪರ್ಕ, ಏಕತೆ, ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಗೆ ಗೌರವ ಮತ್ತು ಪರಿಸರ ಸಂರಕ್ಷಣೆಯನ್ನು ಒಳಗೊಂಡ ಸುರಕ್ಷಿತ ಶಾಂಘೈ ಸಹಕಾರ ಸಂಸ್ಥೆ ಅಗತ್ಯತೆಯೇ ಪ್ರಧಾನಿ ನರೇಂದ್ರ ಮೋದಿ ಅವರ ದೃಷ್ಟಿಕೋನವಾಗಿದೆ ಎಂಬ ಅಂಶವನ್ನು ಪ್ರಮುಖವಾಗಿ ಪ್ರತಿಪಾದಿಸಿದರು.

ಉನ್ನತ ನಿಯೋಗವನ್ನು ಒಳಗೊಂಡ ಈ ಸಭೆಯಲ್ಲಿ ಸಚಿವ ಕುಮಾರಸ್ವಾಮಿ ಅವರೊಂದಿಗೆ ಕಿರ್ಗಿಸ್ತಾನ್ ಗಣರಾಜ್ಯದ ಭಾರತದ ರಾಯಭಾರಿ ಬೀರೇಂದರ್ ಸಿಂಗ್ ಯಾದವ್ ಭಾಗಿಯಾಗಿದ್ದರು.

# ಭಾರತ ಸೇರಿ 60 ರಾಷ್ಟ್ರಗಳ ಮೇಲೆ ಹೊಸ ತೆರಿಗೆ ಹೇರಲು ಮುಂದಾದ ಟ್ರಂಪ್

**ವಾಷಿಂಗ್ಟನ್:** ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸರ್ಕಾರವು ಭಾರತ ಸೇರಿದಂತೆ 60 ರಾಷ್ಟ್ರಗಳ ಮೇಲೆ ಹೊಸ ತೆರಿಗೆ ಹೇರಲು ಮುಂದಾಗಿದೆ. ಶೋಷಿತ ಕಾರ್ಮಿಕರಿಂದ ತಯಾರಾದ ಉತ್ಪನ್ನಗಳ ಆಮದಿನ ಮೇಲೆ ಈ ಹೊಸ ತೆರಿಗೆಯನ್ನು ವಿಧಿಸುವ ಪ್ರಸ್ತಾಪ ಮಾಡಲಾಗಿದೆ. ಭಾರತದ ಮೇಲೆ ಶೇ.12.5ರಷ್ಟು ತೆರಿಗೆ ಬೀಳುವ ಸಾಧ್ಯತೆ ಇದೆ.

ಅಮೆರಿಕದ ವ್ಯಾಪಾರ ಪ್ರತಿನಿಧಿ ನಿನ್ನೆ ಬಿಡುಗಡೆ ಮಾಡಿದ ವರದಿಯಲ್ಲಿ ಈ ಪ್ರಸ್ತಾಪವನ್ನು ಮಾಡಲಾಗಿದೆ. ಭಾರತ, ಚೀನಾ, ಜಪಾನ್, ದಕ್ಷಿಣ ಕೊರಿಯಾ, ಬ್ರೆಜಿಲ್, ಸ್ವಿಜರ್ಲೆಂಡ್ ಮತ್ತು ಬ್ರಿಟನ್‌ನಂತಹ ದೇಶಗಳ ಮೇಲೆ ಶೇ.12.5ರಷ್ಟು ತೆರಿಗೆ ಹೇರಲು ಯೋಜಿಸಲಾಗಿದೆ.

ಇನ್ನು ಕೆನಡಾ, ಮೆಕ್ಸಿಕೋ, ಈಕ್ವೆಡಾರ್, ಇಯು(ಐರೋಪ್ಯ ಒಕ್ಕೂಟ), ಪಾಕಿಸ್ತಾನ ಮತ್ತು ಇಂಡೋನೇಷ್ಯಾ ಸೇ-ರಿದಂತೆ 6 ದೇಶಗಳ ಮೇಲೆ ಶೇ.10ರಷ್ಟು ತೆರಿಗೆ ವಿಧಿಸುವ ಪ್ರಸ್ತಾಪವಿದೆ.

ಈ ಹೊಸ ತೆರಿಗೆಯು ತಕ್ಷಣ ಜಾ-ರಿಯಾಗುವುದಿಲ್ಲ. ಸಾರ್ವಜನಿಕರ ಅಭಿಪ್ರಾಯ ಕೋರಲಾಗುತ್ತಿದೆ.



ಅಭಿಪ್ರಾಯ ಸಂಗ್ರಹದ ನಂತರವಷ್ಟೇ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು ಎಂದು ತಿಳಿಸಲಾಗಿದೆ.

ಭಾರತ ಸರ್ಕಾರವು ಅಮೆ-ರಿಕದ ಈ ಆರೋಪವನ್ನು ಸ್ಪಷ್ಟವಾಗಿ ತಳ್ಳಿಹಾಕಿದೆ. ವಾಣಿಜ್ಯ ಮತ್ತು ಕೈಗಾ-ರಿಕಾ ಸಚಿವಾಲಯ ಇದು ಆಧಾರರಹಿತ ಆರೋಪ. ಶೋಷಿತ ಕಾರ್ಮಿಕರ ಬಗ್ಗೆ ಅಮೆರಿಕ ಹೇಳುವುದು ಸುಳ್ಳು ಎಂದು ಪ್ರತಿಕ್ರಿಯಿಸಿದೆ. ಈ ವಿಷಯವನ್ನು ಎರಡೂ ದೇಶಗಳ ನಡುವಿನ ದ್ವಿಪಕ್ಷೀಯ ವ್ಯಾಪಾರ ಮಾತುಕತೆಗಳಲ್ಲಿ ಚರ್ಚಿಸಲಾಗುವುದು ಎಂದು ತಿಳಿಸಿದೆ.

ಈ ಹಿಂದೆ ಟ್ರಂಪ್ ಸರ್ಕಾರವು ವಿವಿಧ ದೇಶಗಳ ಮೇಲೆ ಹೇರಿದ್ದ ತೆ-ರಿಗೆಗಳನ್ನು ಅಮೆರಿಕ ಸುಪ್ರೀಂ ಕೋರ್ಟ್ ರದ್ದುಪಡಿಸಿದ್ದರಿಂದ, ಈಗ ಹೊಸ ತಂತ್ರವನ್ನು ಅಳವಡಿಸಿಕೊಂಡಿದೆ ಎಂದು ವಿಶ್ಲೇಷಕರು ಹೇಳುತ್ತಿದ್ದಾರೆ. ಫೋರ್ಸ್ಡ್ ಲೇಬರ್ ಆರೋಪದ ಮೂಲಕ ವ್ಯಾಪಾರ ನೀತಿಯನ್ನು ಬದಲಾಯಿಸುವುದು ಟ್ರಂಪ್ ಸರ್ಕಾರದ ಹೊಸ ತಂತ್ರವಾಗಿದೆ.

ಭಾರತದ ವ್ಯಾಪಾರ ತಜ್ಞರು ಈ ಹೊಸ ತೆರಿಗೆಯು ಭಾರತದ ಉತ್ಪನ್ನಗಳ ಸ್ಪರ್ಧಾತಕತೆಯ ಮೇಲೆ ಪರಿಣಾಮ ಬೀರಬಹುದು ಎಂದು ಆತಂಕ ವ್ಯಕ್ತಪಡಿಸಿದ್ದಾರೆ. ಆದರೆ ಭಾರತ ಸರ್ಕಾರವು ಈ ಆರೋಪವನ್ನು ತೀವ್ರವಾಗಿ ನಿರಾಕರಿಸುತ್ತಿದ್ದು, ದ್ವಿಪಕ್ಷೀಯ ಮಾತುಕತೆಗಳ ಮೂಲಕ ಪರಿಹಾರ ಕಂಡುಹಿಡಿಯುವ ವಿಶ್ವಾಸ ವ್ಯಕ್ತಪಡಿಸಿದೆ.

## ಆದಾಯ ತೆರಿಗೆ ಕಾಯ್ದೆ ತಿದ್ದುಪಡಿಗೆ ಮುಂದಾದ ಕೇಂದ್ರ ಸರ್ಕಾರ

**ನವದೆಹಲಿ:** ದೇಶಕ್ಕೆ ವಿದೇಶಿ ಬಂಡವಾಳದ ಒಳಹರಿವನ್ನು ಉತ್ತೇಜಿಸಲು ಮತ್ತು ಇರಾನ್ ಯುದ್ಧದ ಆರ್ಥಿಕತೆಯ ಮೇಲಿನ ಪ್ರತಿಕೂಲ ಪರಿಣಾಮಗಳನ್ನು ತಗ್ಗಿಸಲು ಕೇಂದ್ರ ಸರ್ಕಾರವು ಒಂದು ಪ್ರಮುಖ ಹೆಜ್ಜೆಯನ್ನು ಇಟ್ಟಿದೆ ಎಂದು ಮೂಲಗಳು ತಿಳಿಸಿವೆ.




ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸಚಿವ ಸಂಪುಟವು ಆದಾಯ ತೆರಿಗೆ ಕಾಯ್ದೆಯನ್ನು ತಿದ್ದುಪಡಿ ಮಾಡುವ ಸುಗ್ರೀವಾಜ್ಞೆಯನ್ನು ಅನುಮೋದಿಸಿದೆ ಎಂದು ವರದಿಯಾಗಿದೆ. ಮೂಲಗಳ ಪ್ರಕಾರ, ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐಗಳು) ಭಾರತೀಯ ಸರ್ಕಾರಿ ಭದ್ರತೆಗಳಲ್ಲಿ (ಜಿ-ಸೆಕೆಂಡ್‌ಗಳು) ಮಾಡಿದ ಹೂಡಿಕೆಗಳ ಮೇಲಿನ ಬಂಡವಾಳ ಲಾಭದ ತೆರಿಗೆಯನ್ನು ಈ ಸುಗ್ರೀವಾಜ್ಞೆಯು ಸಂಪೂರ್ಣವಾಗಿ ತೆಗೆದುಹಾಕುತ್ತದೆ. ಇದನ್ನು ರಾಷ್ಟ್ರಪತಿಗಳ ಅನುಮೋದನೆಯ ನಂತರ ಜಾ-ರಿಗೆ ತರಲಾಗುವುದು. ಪ್ರಸ್ತುತ, ವಿದೇಶಿ ಹೂಡಿಕೆದಾರರು 12 ತಿಂಗಳಿಗಿಂತ ಹೆಚ್ಚು ಕಾಲ ಹೊಂದಿರುವ ಬಾಂಡ್‌ಗಳು ಮತ್ತು ಪಟ್ಟಿಮಾಡಿದ ಷೇರುಗಳ ಮೇಲೆ ಶೇ. 12.5 ರಷ್ಟು ದೀರ್ಘಾವಧಿಯ ಬಂಡವಾಳ ಲಾಭದ (ಎಲ್‌ಟಿಸಿಜಿ) ತೆ-ರಿಗೆಯನ್ನು ಪಾವತಿಸುತ್ತಾರೆ. ಇದಲ್ಲದೆ, ಅವರು ಸರ್ಕಾರಿ ಬಾಂಡ್‌ಗಳ ಮೇಲೆ ಗಳಿಸಿದ ಬಡ್ಡಿಯ ಮೇಲೆ ಶೇ. 20 ರಷ್ಟು ತಡೆಹಿಡಿಯುವ ತೆರಿಗೆಯನ್ನು ಸಹ ಪಾವತಿಸುತ್ತಾರೆ. ಮಾರುಕಟ್ಟೆಗಳ ಲೈವ್ ನವೀಕರಣಗಳನ್ನು ಅನುಸ-ರಿಸಿಗಮನಾರ್ಹವಾಗಿ, ಸರ್ಕಾರವು 2023 ರಲ್ಲಿ ಇದರ ಮೇಲಿನ ಶೇಕಡಾ 5 ರಷ್ಟು ರಿಯಾಯಿತಿ ದರವನ್ನು ತೆಗೆದುಹಾಕಿತು. ಆದಾಗ್ಯೂ, ಈ ವರ್ಷ, ವಿದೇಶಿ ಹೂಡಿಕೆದಾರರು ಭಾರತೀಯ ಷೇರು ಮಾರುಕಟ್ಟೆಗಳಿಂದ ರೂ. 2.5 ಲಕ್ಷ ಕೋಟಿಗಳನ್ನು ಹಿಂತೆಗೆದುಕೊಂಡಿದ್ದಾರೆ. ಹೀಗಾಗಿ, ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ವಿದೇಶಿ ಸಾಂಸ್ಥಿಕ ಹೂಡಿಕೆದಾರರು) ಮತ್ತು ಎಫ್‌ಪಿಐ ಗಳು ಮತ್ತಷ್ಟು ಮಾರಾಟ ಮಾಡುವುದನ್ನು ತಡೆಯಲು, ತೆರಿಗೆ ಕಡಿತಕ್ಕೆ ಕರೆಗಳು ಬಂದಿವೆ. ಭಾರತದ ವಿದೇಶೀ ವಿನಿಮಯವನ್ನು ಹೆಚ್ಚಿಸಲು ಮತ್ತು ಜಾಗತಿಕ ಹೂಡಿಕೆಗಳನ್ನು ಆಕರ್ಷಿಸಲು ಭವಿಷ್ಯದಲ್ಲಿ ಹೆಚ್ಚು ಮಹತ್ವದ ಕ್ರಮಗಳನ್ನು ತೆಗೆದುಕೊಳ್ಳುವ ಸಾಧ್ಯತೆಯಿದೆ.ದೀರ್ಘಾವಧಿ ಮತ್ತು ಅಲ್ಪಾವಧಿಯ ಬಂಡವಾಳ ಲಾಭಗಳ ಮೇಲಿನ ತೆರಿಗೆಗಳನ್ನು ಕಡಿಮೆ ಮಾಡುವ ಬಗ್ಗೆ ಹೂಡಿಕೆದಾರರು ಏನು ಹೇಳುತ್ತಾರೆಂದು ಕೇಳಲು ಸಿದ್ಧ-ರಿರುವುದಾಗಿ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ ಕೆಲವು ದಿನಗಳ ನಂತರ ಈ ನಿರ್ಧಾರ ಬಂದಿದೆ. ಜುಲೈ 2024 ರಲ್ಲಿ ಮಂಡಿಸಲಾದ ಕೇಂದ್ರ ಬಜೆಟ್‌ನಲ್ಲಿ, ಹಣಕಾಸು ಸಚಿವರು ಹೆಚ್ಚಿನ ಆಸ್ತಿಗಳ ಮೇಲಿನ ತೆರಿಗೆ ದರವನ್ನು ಶೇಕಡಾ 10 ರಿಂದ ಶೇಕಡಾ 12.5 ಕ್ಕೆ ಹೆಚ್ಚಿಸಿದರು, ಆದರೆ ಪಟ್ಟಿಮಾಡಿದ ಇಕ್ವಿಟಿ ಮತ್ತು ಇಕ್ವಿಟಿ-ಸಂಬಂಧಿತ ಸಾಧನಗಳಿಗೆ ವಿನಾಯಿತಿ ಮಿತಿಯನ್ನು ರೂ. 1.25 ಲಕ್ಷಕ್ಕೆ ಹೆಚ್ಚಿಸಿದರು. ಏತನ್ಮಧ್ಯೆ, ಭಾರತದಲ್ಲಿ ಪಟ್ಟಿ ಮಾಡಲಾದ ಷೇರುಗಳ ಮೇಲಿನ (ಅಲ್ಪಾವಧಿಯ ಬಂಡವಾಳ ಲಾಭಗಳು) ಗೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 111 ಪ್ರಕಾರ ಶೇಕಡಾ 15 ರಷ್ಟು ತೆರಿಗೆ ವಿಧಿಸಲಾಗುತ್ತದೆ.

ಜನಶ್ರೀ ಟೈಮ್ಸ್
ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.

"JANASHREE TIMES" Kannada daily morning Owner, Published by ANANDAYYA DANAYYA VIRAKTAMATH Address: 229/1, 3 RD CROSS VIVEKANAND NAGAR NEAR WATER TANK, GADAG, KARNATAKA - 582101.
Printed at: SHIVANI PRINTERS Printers. Address: AT: HULKOTI T/D: GADAG OFFICE ADDERS: SHIVANI PRINTERS NEW COURT OPPSITE PLOT NO 28 RS NO 312/3B GARAG COMPLEX, GADAG, KARNATAKA - 582101.